ಸಂಪುಟ : 8 ಸಂಚಿಕೆ : 192 ಪುಟ : 4 ಬೆಲೆ : 3.00 ರವಿವಾರ ಸೆಪ್ಟೆಂಬರ್ 03, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 192 Pages : 4 Price : 3.00 Sunday September 03, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಶಿರಹಟ್ಟಿ ತಾಲೂಕು ಪ್ರಗತಿ ಪರಿಶೀಲನೆ ನಡೆಸಿದ ಸಚಿವ ಡಾ. ಎಚ್.ಕೆ ಪಾಟೀಲ

# ಅಪ್ರಾಮಾಣಿಕ ಆಡಳಿತವನ್ನು ಸರ್ಕಾರ ಸಹಿಸದು



■ವಿಜಯಸಾಕ್ಷಿ ಸುದ್ದಿ, ಗದಗ

ಬಡವರ ಶೋಷಣೆ ನಿಲ್ಲಬೇಕು. ಭ್ರಷ್ಟಾಚಾರ ಮುಕ್ತ ಆಡಳಿತಕ್ಕೆ ಒತ್ತುನೀಡಿ, ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಶಿಸ್ತುಬದ್ಧ ಕಾರ್ಯನಿರ್ವಹಣೆಗೆ ಮುಂದಾಗುವಂತೆ ಅಧಿಕಾರಿಗಳಿಗೆ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಸೂಚಿಸಿದರು.

ಜಿಲ್ಲೆಯ ಶಿರಹಟ್ಟಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಶನಿವಾರ ಜರುಗಿದ ತಾಲೂಕಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಸಚಿವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಸರ್ಕಾರ ಬಡವರ ಕಲ್ಯಾಣಕ್ಕೆ ಬದ್ಧ ಸರ್ಕಾರವಾಗಿದೆ. ಜನಸಾಮಾನ್ಯರ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಿ ಕಾರ್ಯನಿರ್ವಹಿಸಬೇಕು. ಅಪ್ರಾಮಾಣಿಕ ಆಡಳಿತವನ್ನು ಸರ್ಕಾರ ಸಹಿಸುವುದಿಲ್ಲ ಎಂದು ಸಚಿವರು ಸಭೆಯಲ್ಲಿ ಎಚ್ಚರಿಸಿದರು.

ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ನೇತೃತ್ವದ ರಾಜ್ಯಸರ್ಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಬಡವರ ಬದುಕಲ್ಲಿ ಅಗಾಧ ಬದಲಾವಣೆ ತರುವ ಕಾರ್ಯ ಮಾಡಿದೆ. ಪಂಚ ಗ್ಯಾರಂಟಿಗಳಲ್ಲಿ ಈಗಾಗಲೇ ಶಕ್ತಿ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮೀ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಎಲ್ಲ ಯೋಜನೆಗಳು ತಾಲೂಕಿನ ಪ್ರತಿ ಅರ್ಹ ಫಲಾನುಭವಿಗಳಿಗೆ ಪೂರ್ಣಪ್ರಮಾಣದಲ್ಲಿ ತಲುಪಬೇಕು. ಈ ನಿಟ್ಟಿನಲ್ಲಿ ಆಡಳಿತ ವರ್ಗ ನಿರಂತರ ಕಾರ್ಯದ ಮೂಲಕ ಶ್ರಮಿಸಬೇಕು ಎಂದರು.

ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲಿಸಿದ ಸಚಿವ ಎಚ್.ಕೆ ಪಾಟೀಲರು, ಗೃಹಜ್ಯೋತಿ ಯೋಜನೆಯು ಅರ್ಹರೆಲ್ಲರಿಗೂ ತಲುಪಬೇಕು. ಅಧಿಕಾರಿಗಳು ಶೇ.100ರಷ್ಟು ಗುರಿ ಸಾಧಿಸಬೇಕು. ತಾಲೂಕಿನಲ್ಲಿ ಸೋಲಾರ್, ಪವನ ವಿದ್ಯುತ್ ಉತ್ಪಾದನೆಗೆ ವಿಫುಲ ಅವಕಾಶಗಳಿವೆ. ಇಲ್ಲಿನ ರೈತರಿಗೆ ಈ ಬಗ್ಗೆ ▶▶3ನೇ ಪುಟಕ್ಕೆ



> ಶಿರಹಟ್ಟಿ ತಾಲೂಕು ನೈಸರ್ಗಿಕವಾಗಿ, ಐತಿಹಾಸಿಕವಾಗಿ, ಧಾರ್ಮಿಕವಾಗಿ ಸಂಪದ್ಭರಿತವಾಗಿದೆ. ವರವಿಯ ಮೌನೇಶ, ಹೊಳಲಮ್ಮ ದೇವಸ್ಥಾನ, ಶ್ರೀಮಂತಗಡ, ಕೋಮುಸೌಹಾರ್ದತೆಯ ಪ್ರತೀಕ ಫಕೀರೇಶ್ವರ ಮಠ, ಅಗಾಧ ಸಸ್ಯ ಸಂಪದ್ಭರಿತ ನೈಸರ್ಗಿಕ ಪ್ರಕೃತಿಯನ್ನು ಶಿರಹಟ್ಟಿ ತಾಲೂಕು ತನ್ನ ಒಡಲಲ್ಲಿ ಹೊಂದಿದೆ. ತಾಲೂಕು ವ್ಯಾಪ್ತಿ ಚಿಕ್ಕದಾಗಿದ್ದು, ಅದನ್ನು ಸಮರ್ಪಕವಾಗಿ, ಸರಿಯಾಗಿ ಅಭಿವೃದ್ಧಿಪಡಿಸುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ.
>
> **– ಎಚ್.ಕೆ ಪಾಟೀಲ.**
> ಜಿಲ್ಲಾ ಉಸ್ತುವಾರಿ ಸಚಿವರು.

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಸೆಪ್ಟೆಂಬರ್ 3 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ**

ವಾರ್ಡ್ ನಂ. 22ರಲ್ಲಿ ಗಂಗಿಮಡಿ ದೊಡ್ಡಮಸೀದಿಯ ಲೈನ್, ಮೇಲಿನ ಲೈನ್, ಕೆಳಗಿನ ಲೈನ್, ಮತ್ತು ಉಳಿದ ಭಾಗಗಳು, ನರಗುಂದಕರ ಲೈನ್, ಧಾರವಾಡದ ಲೈನ್, ಹಳೇ ಕಚೇರಿ ಲೈನ್, ಸುಣಗಾರ ಓಣಿ ಕುದರಿ ಮೆಂಬರ್ ಲೈನ್, ಅನಪಿನ ಓಣಿ ಲೈನ್, ವಾರ್ಡ್ ನಂ

1ರಲ್ಲಿ ಎಸ್, ಎಮ್. ಕೃಷ್ಣನಗರ, ವಾರ್ಡ್ ನಂ. .8, 9, 10ರಲ್ಲಿ ಹೆಲ್ತ್ ಕ್ಯಾಂಪ್ ಸಂಪೂರ್ಣ ಭಾಗಗಳು, ಗೋರಿಯವರ ಲೈನ್, ಗಣಪತಿ ಲೈನ್, ಮಲ್ಲರಾಯನಕಟ್ಟಿ ಲೈನ್, ಅಶೋಕ ಗೌಡ ಲೈನ್, ಬೋರೆಗಾರ ಓಣಿ, ಕುರಹಟ್ಟಿ ಭಾಗಗಳು, ವಾರ್ಡ್ ನಂ. 35ರಲ್ಲಿ ನೀಲಮ್ಮತಾಯಿ ಮಠದ ಕೆಲವು ಭಾಗಗಳು, ವಾರ್ಡ್ ನಂ. 05ರಲ್ಲಿ ಕೆ.ಎಚ್.ಡಿ.ಸಿ. ನೇಕಾರ ಕಾಲೋನಿಯ ಭಾಗಗಳು, ರಂಗಾವಧೂತ ನಗರ, ಅಯೋಧ್ಯ ನಗರ ಸಿ. ಕಾಲೋನಿ, ವಾರ್ಡ್ ನಂ. 28ರಲ್ಲಿ ಪಂಚಾಕ್ಷರಿ ನಗರ 5ನೇ ಕ್ರಾಸ್. ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಡುವಕ್ಕಲಿಗರ ಸಂಘದ ವಾರ್ಷಿಕ ಮಹಾಸಭೆ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಕರ್ನಾಟಕ ಕುಡುವಕ್ಕಲಿಗರ ಸಂಘದ ವಾರ್ಷಿಕ ಮಹಾಸಭೆ, ನೂತನ ಜನಪ್ರತಿನಿಧಿಗಳಿಗೆ ಮತ್ತು ಸಮಾಜದ ಮಾಜಿ ಸೈನಿಕರಿಗೆ ಸನ್ಮಾನ ಸಮಾರಂಭವು ರವಿವಾರ ಬೆಳಿಗ್ಗೆ 10.30ಕ್ಕೆ ಕುಡುಒಕ್ಕಲಿಗರ ಭವನ, ಬಿಂಕದಕಟ್ಟಿ ಪ್ರಾಣಿಸಂಗ್ರಹಾಲಯದ ಹತ್ತಿರ, ಗದಗ ಇಲ್ಲಿ ಜರುಗಲಿದೆ.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಪೂಜ್ಯಶ್ರೀ ಅಭಿನವ ಚನ್ನಬಸವ ಮಹಾಸ್ವಾಮಿಗಳು, ನಿಡಗುಂದಿಕೊಪ್ಪ ಶಾಖಾ ಶಿವಯೋಗಿ ಮಂದಿರ ಇವರು ವಹಿಸುವರು. ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ ಪಾಟೀಲರು ಉದ್ಘಾಟನೆ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಎಸ್ ಪಾಟೀಲ, ಸಿ.ಸಿ ಪಾಟೀಲ, ಡಾ. ಚಂದ್ರು ಲಮಾಣಿ ಆಗಮಿಸುವರು.

ಅಧ್ಯಕ್ಷತೆಯನ್ನು ಸಂಘದ ರಾಜ್ಯಾಧ್ಯಕ್ಷ ಶಿವಕುಮಾರಗೌಡ ಎಚ್.ಪಾಟೀಲ ವಹಿಸುವರು. ಇದೇ ಸಂದರ್ಭದಲ್ಲಿ ನೂತನ ಯುವಕ ಸಂಘವನ್ನು ಮುಖಂಡ ನವೀನ ಈಶಣ್ಣ ಗುಳಗಣ್ಣವರ ಉದ್ಘಾಟಿಸುವರು. ಸಂಘದ ಉಪಾಧ್ಯಕ್ಷ ಈರಪ್ಪ ಬಿಸನಳ್ಳಿ ಉಪಸ್ಥಿತರಿರುವರು.

ಸಂಘದ ಆಜೀವ ಸದಸ್ಯರು ಹಾಗೂ ಕುಡು ವಕ್ಕಲಿಗರ ಸಮಾಜದ ಜನತೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಂಘದ ಕಾರ್ಯದರ್ಶಿ ಶರಣಪ್ಪ ದಿಡ್ಡಿಮನಿ ವಿನಂತಿಸಿದ್ದಾರೆ.

## 'ಬರಪೀಡಿತ ತಾಲೂಕು' ಘೋಷಣೆಗೆ ಮನವಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪ್ರಸ್ತುತ ವರ್ಷ ನಿರೀಕ್ಷೆಯಷ್ಟು ಹಾಗೂ ಸಕಾಲದಲ್ಲಿ ಮಳೆಯಾಗದೇ ಇರುವುದರಿಂದ ರೈತ ಸಮುದಾಯ ಸಂಕಷ್ಟಕ್ಕೆ ಸಿಲುಕಿದೆ. ಸಾಲ-ಸೋಲ ಮಾಡಿ ಜೀವನ ನಡೆಸುವ ಸ್ಥಿತಿ ನಿರ್ಮಾಣವಾಗಿದೆ. ಹಿಂಗಾರು ಹಂಗಾಮಿಗೂ ಮಳೆಯಾಗುವ ಮುನ್ಸೂಚನೆಯೂ ಇಲ್ಲದೆ, ರೈತರು ಚಿಂತೆಗೀಡಾಗುವಂತಾಗಿದೆ. ಹೀಗಾಗಿ, ಕೂಡಲೇ ಸರಕಾರ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲರಿಗೆ ಮುಳಗುಂದ ಹಸಿರು ರೈತ ಸೇನೆ ಹಾಗೂ ಮುಳಗುಂದ ರೈತ ಬಾಂಧವರು ಮನವಿ ಸಲ್ಲಿಸಿದರು.

ರೈತ ಸಂಘದ ಅಧ್ಯಕ್ಷ ಬಸವರಾಜ ಕರಿಗಾರ, ಡಿ.ಎಫ್ ಅಣ್ಣಿಗೇರಿ, ಜಿ.ಎಂ ಗಾಡಿ, ದೇವರಾಜ ಸಂಗನಪೇಟಿ, ಮುತ್ತಪ್ಪ ಪಲ್ಲೇದ, ಪ.ಪಂ ಮಾಜಿ ಸದಸ್ಯ ಎ.ಡಿ ಮುಜಾವಾರ, ಮುಳಗುಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ವಿ ಸುಂಕಾಪೂರ, ಹೈದರ ಖವಾಸ ಸೇರಿದಂತೆ ರೈತ ಬಾಂಧವರು ಇದ್ದರು.




ಚಂದ್ರಯಾನ-3ರ ವಿಕ್ರಂ ಲ್ಯಾಂಡರ್ ಚಂದ್ರನ ದಕ್ಷಿಣಧ್ರುವದಲ್ಲಿ ಯಶಸ್ವಿಯಾಗಿ ಇಳಿದಿದ್ದು, ಇಂತಹ ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗಿಯಾದ ಗದುಗಿನ ಇಸ್ರೋ ವಿಜ್ಞಾನಿ ಧೀರೇಂದ್ರ ಬಿಂದಗಿಯವರನ್ನು ಗದಗ ಜಿಲ್ಲಾ ಅಲ್ಯೂಮಿನಿಯಂ ಫ್ಯಾಬ್ರಿಕೇಟರ್ ಸಂಘದಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮೈನುದ್ದಿನ್ ಗುಜಮಾಗಡಿ, ಮಹಮ್ಮದ್ ತೌಸೀಫ್ ಲಕ್ಕುಂಡಿ, ಇಬ್ರಾಹೀಮ್ ಹಳ್ಳಿಕೇರಿ, ನಜೀರ್ ಅಹಮ್ಮದ ಕೊಟ್ಟೂರ, ಲಿಯಾಕತ್ ಮುಲ್ಲಾ ಮುಂತಾದವರು ಉಪಸ್ಥಿತರಿದ್ದರು.


## ರಾಜೀ ಸಂಧಾನದ ಮೂಲಕ ಪ್ರಕರಣಗಳ ಇತ್ಯರ್ಥಕ್ಕೆ ಸುವರ್ಣಾವಕಾಶ

# ಸೆ.9ರಂದು ರಾಷ್ಟ್ರೀಯ ಲೋಕ ಅದಾಲತ್

■ವಿಜಯಸಾಕ್ಷಿ ಸುದ್ದಿ, ಗದಗ

ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಪರಸ್ಪರ ರಾಜಿ ಸಂಧಾನ ಮಾಡಿಕೊಳ್ಳುವ ಮೂಲಕ ಸಾರ್ವಜನಿಕರು, ಪಕ್ಷಗಾರರು ತಮ್ಮ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಿಕೊಳ್ಳಲು ಸುವರ್ಣಾವಕಾಶವಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ



ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ರಾಜೀ ಸಂಧಾನಕ್ಕಾಗಿ ಪ್ರತಿಯೊಂದು ನ್ಯಾಯಾಲಯಕ್ಕೆ ಒಂದು ಬೆಂಚ್‌ನಂತೆ ಒಟ್ಟು 16 ಬೆಂಚ್‌ಗಳನ್ನು ರಚಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 19428 ವಿವಿಧ ಚಾಲ್ತಿ ಪ್ರಕರಣಗಳಿದ್ದು, ಅದರಲ್ಲಿ ಈಗಾಗಲೇ ರಾಜೀ ಆಗಬಹುದಾದ 2965 ಪ್ರಕರಣಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಸಿವಿಲ್ ದಾವೆಗಳಾದ ಜಮೀನುಗಳಿಗೆ, ಮನೆ ಹಾಗೂ ನಿವೇಶನಕ್ಕೆ ವ್ಯಾಜ್ಯಗಳು, ಭೂಸ್ವಾಧೀನ, ಬ್ಯಾಂಕ್ ವಸೂಲಾತಿ ಪ್ರಕರಣಗಳು, ದರಖಾಸ್ತು ಅರ್ಜಿಗಳು, ಕಾರ್ಮಿಕರ ಪ್ರಕರಣಗಳು, ಮರಳು ಕಳ್ಳ ಸಾಗಾಣಿಕೆ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ವಾಹನ ಅಪಘಾತ ಪ್ರಕರಣಗಳು, ವೈವಾಹಿಕ ಪ್ರಕರಣಗಳು ಹಾಗೂ ರಾಜೀ ಆಗಲು ಅರ್ಹವಿರುವ ಕ್ರಿಮಿನಲ್ ಕಂಪೌಂಡೆಬಲ್ ಪ್ರಕರಣಗಳು ಸೇರಿದಂತೆ ಹಲವಾರು ಪ್ರಕರಣಗಳನ್ನು ರಾಜೀಗಾಗಿ ▶▶3ನೇ ಪುಟಕ್ಕೆ

## ಇಂದು ಜಾನಪದ ಜಾತ್ರೆ



■ವಿಜಯಸಾಕ್ಷಿ ಸುದ್ದಿ, ಗದಗ

ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಸರುವಾಸಿಯಾದ ಬಸವೇಶ್ವರ ನಗರದಲ್ಲಿ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಶ್ರೀ ವೀರಭದ್ರ ದೇವರ 71ನೇ ಮಹಾರಥೋತ್ಸವ ಅಂಗವಾಗಿ ರವಿವಾರ ಸಂಜೆ 6.30ಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗದಗ ಇವರ ಸಹಯೋಗದಲ್ಲಿ ಶಂಕ್ರಣ್ಣ ಸಂಕಣ್ಣವರ ಹಾಗೂ ಸಂಗಡಿಗರ ಅರುಣೋದಯ ಕಲಾ ತಂಡ ಕೊತಬಾಳ ಇವರಿಂದ ಜಾನಪದ ಜಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮಕ್ಕೆ ಕಲಾಭಿಮಾನಿಗಳು ಆಗಮಿಸಬೇಕಾಗಿ ಜಾತ್ರಾ ಮಹೋತ್ಸವದ ಅಧ್ಯಕ್ಷ ದಾನೇಶ ತಡಸದ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಇಂದು ಮಹಾತ್ಮಾಗಾಂಧಿ ಹಾಕಿ ಕ್ರೀಡಾಂಗಣ ಉದ್ಘಾಟನೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಹಯೋಗದಲ್ಲಿ ಸೆಪ್ಟೆಂಬರ್ 3 ರಂದು ಸಂಜೆ 4.30 ಗಂಟೆಗೆ ಗದಗ-ಬೆಟಗೇರಿಯ ಗಾಂಧಿ ನಗರದ ಮಹಾತ್ಮಾಗಾಂಧಿ ಹಾಕಿ ಕ್ರೀಡಾಂಗಣದ ಉದ್ಘಾಟನಾ ಸಮಾರಂಭವು ಜರುಗಲಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ.ಎಚ್.ಸಿ. ಮಹಾದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ವಿಶೇಷ ಆಹ್ವಾನಿತರಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರಾದ ಬಿ.ನಾಗೇಂದ್ರ ಆಗಮಿಸುವರು ಮತ್ತು ಅಂತಾರಾಷ್ಟ್ರೀಯ ಹಾಕಿ ಕ್ರೀಡಾಪಟುಗಳನ್ನು ಸನ್ಮಾನಿಸುವರು.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ▶▶3ನೇ ಪುಟಕ್ಕೆ

## ನಿಧಿ ಆಸೆಗಾಗಿ ದೇವಸ್ಥಾನದಲ್ಲಿ ಗುಂಡಿ ಅಗೆದ ಕಳ್ಳರು

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಲಕ್ಕುಂಡಿ ಗ್ರಾಮದ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೋಟೆಲ್ ಹಾಗೂ ಮನೆಗಳ ಕಳ್ಳತನವಾಗಿರುವ ಘಟನೆಗಳು ಇನ್ನೂ ಹಸಿಯಾಗಿರುವಾಗಲೇ, ಇಲ್ಲಿಯ ದೇವಸ್ಥಾನವೊಂದರಲ್ಲಿ ನಿಧಿ ಆಸೆಗಾಗಿ ಕಳ್ಳರು ಮೂರ್ತಿಯಿರುವ ಸ್ಥಳವನ್ನು ಅಗೆದ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಗ್ರಾಮದಿಂದ 3 ಕೀ.ಮೀ ದೂರದಲ್ಲಿರುವ ಕದಾಂಪೂರ



ಗ್ರಾಮದ ರಸ್ತೆಗೆ ಹೊಂದಿಕೊಂಡಿರುವ ಜಮೀನೊಂದರಲ್ಲಿ ಈ ಘಟನೆ ನಡೆದಿದೆ. ಐತಿಹಾಸಿಕ ಸೋಮೇಶ್ವರ ದೇವಾಲಯದ ಒಳಗೆ ಈಶ್ವರಲಿಂಗ ಮೂರ್ತಿಯ ಮುಂದೆ ಇದ್ದ ಬಸವಣ್ಣನ ಮೂರ್ತಿಯನ್ನು ಕಿತ್ತು ಹಾಕಿ, ಅದರ ಕೆಳಗೆ ಸುಮಾರು ಹತ್ತು ಅಡಿ ಆಳಕ್ಕೆ ▶▶3ನೇ ಪುಟಕ್ಕೆ

## ಶಿರಹಟ್ಟಿ ತಾಲೂಕು ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಂದ ಮಾಹಿತಿ

# ಗ್ಯಾರಂಟಿ ಯೋಜನೆಗಳ ಪ್ರಗತಿ ವರದಿ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಇಲ್ಲಿನ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಶನಿವಾರ ಜರುಗಿದ ತಾಲೂಕಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತು ಪ್ರಗತಿ ವರದಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲರಿಗೆ ಹಾಗೂ ಸಭೆಗೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು ಮಾಹಿತಿ ಒದಗಿಸಿದರು.

ಶಕ್ತಿ ಯೋಜನೆಯಡಿಯಲ್ಲಿ ತಾಲೂಕಿನಲ್ಲಿ ದಿನಂಪ್ರತಿ ಸರಾಸರಿ 6043 ಮಹಿಳೆಯರು ಉಚಿತವಾಗಿ



ಪ್ರಯಾಣಿಸುತ್ತಿದ್ದಾರೆ. ಇದರ ಟಿಕೆಟ್ ಮೌಲ್ಯ 1.30 ಲಕ್ಷ ರೂ. ಆಗಲಿದೆ. ಜೂನ್ ಮಾಹೆಯಲ್ಲಿ 1,00,789, ಜುಲೈ ಮಾಹೆಯಲ್ಲಿ 1.82 ಲಕ್ಷ, ಆಗಸ್ಟ್ ಮಾಹೆಯಲ್ಲಿ 1.78 ಲಕ್ಷ ಮಹಿಳೆಯರು ಪ್ರಯಾಣಿಸಿದ್ದಾರೆ. ಒಟ್ಟಾರೆ 4.61 ಲಕ್ಷ ಮಹಿಳೆಯರು ಈವರೆಗೂ ಪ್ರಯಾಣಿಸಿದ್ದು, ಶೂನ್ಯ ಟಿಕೆಟ್ ನೀಡಿದ ಒಟ್ಟು ಮೊತ್ತ 1.05 ಕೋಟಿ ರೂ.ಗಳಾಗಿದೆ ಎಂದರು.

ಗೃಹಜ್ಯೋತಿ ಯೋಜನೆಯಡಿ ತಾಲೂಕಿನಲ್ಲಿ 22,041 ಅರ್ಹ ಫಲಾನುಭವಿಗಳಿದ್ದು 20,498 ಫಲಾನುಭವಿಗಳು ನೋಂದಣಿ ಮಾಡಿಕೊಂಡು ಯೋಜನೆಯ ಸೌಲಭ್ಯ ಪಡೆದಿದ್ದಾರೆ. 1543 ಅರ್ಹ ಫಲಾನುಭವಿಗಳ ನೋಂದಣಿ ಕಾರ್ಯ ನಡೆದಿದ್ದು, ಅವರೂ ಸಹ ಸೆಪ್ಟೆಂಬರ್ ಮಾಹೆಯಲ್ಲಿ ಯೋಜನೆಯ ಸೌಲಭ್ಯ ಪಡೆಯಲಿದ್ದಾರೆ ಎಂದರು.

ಅನ್ನಭಾಗ್ಯ ಯೋಜನೆಯಡಿ ತಾಲೂಕಿನಲ್ಲಿ 23,314 ಪಡಿತರ ಚೀಟಿಯ ಅರ್ಹ ಫಲಾನುಭವಿಗಳಿದ್ದು, 2,999 ಅಂತ್ಯೋದಯ ಹಾಗೂ 20,415 ಬಿಪಿಎಲ್ ಪಡಿತರದಾರರನ್ನು ಒಳಗೊಂಡಿದೆ. 18,281 ಪಡಿತರ ಚೀಟಿದಾರರ 62,579 ಫಲಾನುಭವಿಗಳು ಡಿಬಿಟಿ ಮೂಲಕ ಹಣ ವರ್ಗಾವಣೆಗೆ ಅರ್ಹರಾಗಿದ್ದಾರೆ. ಅವರೆಲ್ಲರಿಗೂ ಜುಲೈ ಮಾಹೆಯಲ್ಲಿ 1.39 ಕೋಟಿ, ಆಗಸ್ಟ್ ಮಾಹೆಯಲ್ಲಿ 1.41 ಕೋಟಿ ರೂ. ಮೊತ್ತವನ್ನು ಬ್ಯಾಂಕ್ ಖಾತೆಗೆ ಜಮೆ ▶▶3ನೇ ಪುಟಕ್ಕೆ

## ಸಾಕ್ಷಿ ಸುಭಾಷಿತ

ಪರಿಶುದ್ಧವಾದ ಆಲೋಚನೆ ಕತ್ತಿಯ ಅಲಗಿಗಿಂತ ಹರಿತ; ಆದುದರಿಂದ ಪರಿಶುದ್ಧವಾದ ಹಾಗೂ ಪವಿತ್ರವಾದ ಆಲೋಚನೆಗಳನ್ನೇ ಮಾಡಬೇಕು.

–ಸ್ವಾಮಿ ಶಿವಾನಂದ

## ಸಂಪಾದಕೀಯ

# ಸರಕಾರಕ್ಕೆ 100 ದಿನ; 33 ಹೊಸ ಕಾರು

ಗ್ಯಾರಂಟಿ ಘೋಷಣೆಗಳ ಮೂಲಕ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ 100 ದಿನ ಪೂರೈಸಿದೆ. ಈ ಸಂಭ್ರಮವನ್ನು ಮತ್ತೊಂದು ಜನಪರ ಕಾರ್ಯಕ್ರಮದ ಮೂಲಕ ಅರ್ಥಪೂರ್ಣವಾಗಿ ಆಚರಿಸಬೇಕಿದ್ದ ಸರಕಾರ ದುಂದುವೆಚ್ಚಕ್ಕೆ ಮುಂದಾಗಿದೆ.

ಅದು ಬರೊಬ್ಬರಿ 33 ಸಚಿವರಿಗೂ ಹೊಸ ಕಾರು ಖರೀದಿಸುವ ಮೂಲಕ ಬಡವರ ಪರ ಕೆಲಸ ಮಾಡುವ ಸಚಿವರಿಗೆ ಶ್ರೀಮಂತರ ಕಾರು ಉಡುಗೊರೆ ನೀಡಿದೆ. ಬಡವರಿಗೆ ಉಡುಗೊರೆ ನೀಡಬೇಕಾಗಿದ್ದ ಸರಕಾರ, ತನ್ನ ಸಚಿವರಿಗೆ ಉಡುಗೊರೆ ಕೊಟ್ಟುಕೊಂಡು ರಾಜ್ಯದ ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಸದ್ಯ ರಾಜ್ಯದಲ್ಲಿ ಮಂತ್ರಿಗಳು ಬಳಸುತ್ತಿರುವ ಕಾರುಗಳು ಇನ್ನೂ ಸಾಕಷ್ಟು ಗಟ್ಟಿಮುಟ್ಟಾಗಿವೆ. ಮೂರು ವರ್ಷದ ಹಿಂದೆ ಕೆಲವೊಂದನ್ನು ಖರೀಸಲಾಗಿತ್ತು. ಈವರೆಗೆ ಯಾವುದೇ ಸಚಿವರ ಕಾರು ಕೆಟ್ಟ ನಿಂತ ಉದಾಹರಣೆ ಇಲ್ಲ, ಕನಿಷ್ಠ ಪಂಚರ್ ಸಹ ಆಗಿಲ್ಲ. ಇನ್ನು ಕೆಲ ಕಾರುಗಳ ಟೈರ್ ಬದಲಾವಣೆ ಸಹ ಮಾಡಿಲ್ಲ. ಅಷ್ಟರಲ್ಲಾಗಲೇ ಹೊಸ ಕಾರು ಖರೀದಿಸಲಾಗಿದೆ. ಸದ್ಯ ಮಂತ್ರಿಗಳ ಕಾರು ಖರೀದಿಗೆ ಸುಮಾರು 10 ಕೋಟಿ ರೂ. ವ್ಯಯಿಸಲಾಗಿದೆ. ಸರಕಾರಕ್ಕೆ ಇದು ದೊಡ್ಡ ಮೊತ್ತವೇನಲ್ಲ. ಆದರೆ ರಾಜ್ಯದ ಜನರ ತೆರಿಗೆ ಹಣವನ್ನು ಕಾರು ಖರೀದಿಗೆ ಬಳಕೆ ಮಾಡಿಕೊಂಡಿದ್ದು ಸರಿಯಲ್ಲ.

ಕಾಂಗ್ರೆಸ್ ಬಡವರ ಪಕ್ಷ, ದೀನ ದಲಿತರ ಪರವಾಗಿರುವ ಪಕ್ಷ ಎನ್ನುತ್ತಲೆ ದುಬಾರಿ ಬೆಲೆಯ ಕಾರು, ಅದು ಏಕಕಾಲಕ್ಕೆ ಎಲ್ಲ ಮಂತ್ರಿಗಳಿಗೂ ಹೊಸ ಕಾರು ಖರೀದಿ ಮಾಡಿರುವುದು ನೋಡಿದರೆ, ಬಡವರ ಪಕ್ಷ ಎನ್ನುವುದು ಕೇವಲ ಭಾಷಣದ ಸರಕು ಎನ್ನುವುದು ಸ್ಪಷ್ಟವಾಗುತ್ತದೆ.

ಕಾಂಗ್ರೆಸ್ ಸರಕಾರ ಈ ರೀತಿಯ ದುಂದುವೆಚ್ಚ ಮಾಡುತ್ತಿರುವುದು ಇದೇ ಮೊದಲೇನಲ್ಲ. ಸಿದ್ದರಾಮಯ್ಯ ಪ್ರಮಾಣವಚನ ಸ್ವೀಕರಿಸುವುದಕ್ಕೂ ಮುನ್ನವೇ 1 ಕೋಟಿ ರೂ. ಮೌಲ್ಯದ ಖರೀದಿಸಿದ್ದು ಎನ್ನಲಾಗುವ ಕಾರು ಸಹ ಸಾಕಷ್ಟು ಟೀಕೆಗೆ ಗುರಿಯಾಗಿತ್ತು. ಈಗ ಮತ್ತೊಮ್ಮೆ ಅಂಥದ್ದೇ ಟೀಕೆಗೆ ಗುರಿಯಾಗಿದೆ.

ರಾಜ್ಯದ ಜನ ಸರಕಾರದ ಇಂಥ ದುಂದುವೆಚ್ಚದ ಬಗ್ಗೆ ಧ್ವನಿ ಎತ್ತದಿದ್ದರೆ ಕಾಂಗ್ರೆಸ್ ಎಲ್ಲ ಶಾಸಕರಿಗೆ ಹೊಸ ಕಾರು ಖರೀದಿಸುವ ನಿರ್ಧಾರ ಕೈಗೊಂಡರು ಅಚ್ಚರಿಪಡಬೇಕಿಲ್ಲ. ವಿರೋಧ ಪಕ್ಷದ ಶಾಸಕರಿಗೆ ಕಾರು ಭಾಗ್ಯ ಕಲ್ಪಿಸುವ ಸಾಧ್ಯತೆಗಳುವೆ. ಅಲ್ಲದೇ ಭವಿಷ್ಯದಲ್ಲಿ ಸರಕಾರಗಳು ಬದಲಾದಂತೆ, ಹೊಸ ಹೊಸ ಸರಕಾರದ ಮಂತ್ರಿಗಳು, ಶಾಸಕರು ಈ ರೀತಿ ಅಧಿಕಾರಕ್ಕೆ ಬಂದ ತಕ್ಷಣ ಕಾರು ಖರೀದಿಸುವ ನಿರ್ಣಯ ಕೈಗೊಳ್ಳುವಂತಾದರೆ, ಕೋಟ್ಯಾಂತರ ರೂ. ದುಂದುವೆಚ್ಚ ಮಾಡುವ ಸಂಪ್ರದಾಯ ರೂಢಿಯಾಗಬಹುದು. ಜನ ಈ ಬಗ್ಗೆ ಎಚ್ಚೆತ್ತುಕೊಳ್ಳದಿದ್ದರೆ ತೆರಿಗೆದಾರರ ಹಣ ಬೇಕಾಬಿಟ್ಟು ಬಳಕೆಗೆ ಅಂಕುಶವೇ ಇರುವುದಿಲ್ಲ.

# ನಿದ್ರೆಗೆ ಜಾರಲಿವೆ ಪ್ರಗ್ಯಾನ್ ರೋವರ್, ವಿಕ್ರಮ್ ಲ್ಯಾಂಡರ್: ಚಂದ್ರಯಾನ 3 ಮುಂದಿನ ಕಥೆ ಏನು?

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**


ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ತಾನಂದುಕೊಂಡಂತೆಯೇ ಚಂದ್ರಯಾನ 3 ಯೋಜನೆಯನ್ನೂ ಶೇ.100ರಷ್ಟು ಯಶಸ್ಸಿನೊಂದಿಗೆ ಪೂರ್ಣಗೊಳಿಸಿದ್ದು, ಇದೀಗ ಚಂದ್ರ ಮೇಲೆ ಇಳಿದಿರುವ ಪ್ರಗ್ಯಾನ್ ರೋವರ್, ವಿಕ್ರಮ್ ಲ್ಯಾಂಡರ್ ನಿದ್ರೆಗೆ ಜಾರುವ ಕಾಲ ಸನ್ನಿಹಿತವಾಗಿದೆ ಎಂದು ಇಸ್ರೋ ಮಾಹಿತಿ ನೀಡಿದೆ.

ಹೌದು.. ಚಂದ್ರಯಾನ 3 ರ ರೋವರ್ ಮತ್ತು ಲ್ಯಾಂಡರ್ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಈಗಾಗಲೇ ರೋವರ್ ಮತ್ತು ಲ್ಯಾಂಡರ್ ಚಂದ್ರನ ಕುರಿತ ಸಾಕಷ್ಟು ನಿಗೂಢ ಅಂಶಗಳ ಮೇಲೆ ಬೆಳಕು ಚೆಲ್ಲಿವೆ. ಚಂದ್ರನ ಮೇಲ್ಮೈ ವಾತಾವರಣದ ತಾಪಮಾನ, ಸಲ್ಫರ್ ಇರುವಿಕೆ, ಚಂದ್ರನೊಳಗಿನ ಕಂಪನಗಳು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದೆ. ಇದೀಗ ಚಂದ್ರನಲ್ಲಿ ರಾತ್ರಿ ಆವರಿಸುತ್ತಿದ್ದು ಹೀಗಾಗಿ ಇಸ್ರೋ ತನ್ನ ಪ್ರಗ್ಯಾನ್ ರೋವರ್ ಮತ್ತು ವಿಕ್ರಮ್ ಲ್ಯಾಂಡರ್ ಗಳನ್ನು ಸ್ಲೀಪಿಂಗ್ ಮೋಡ್ ಅಂದರೆ ನಿದ್ರೆಯಲ್ಲಿರಿಸಲು ಸಿದ್ಧತೆ ನಡೆಸಿದೆ.

ಅಂದಹಾಗೆ ಚಂದ್ರನಲ್ಲಿ ಒಂದು ರಾತ್ರಿ ಎಂದರೆ ಭೂಮಿಯಲ್ಲಿ ಸುಮಾರು 14 ದಿನಗಳು... ಇಷ್ಟು ದಿನ ಇದ್ದ ಹಗಲು ಸುಮಾರು 14 ದಿನಗಳ ಕಾಲ ಇತ್ತು. ಹೀಗಾಗಿ ಈ 14 ದಿನಗಳ ಕಾಲ ರೋವರ್ ಮತ್ತು ಲ್ಯಾಂಡರ್ ನಿರಂತರವಾಗಿ ಕಾರ್ಯ ನಿರ್ವಹಿಸಿತ್ತು.

## ಬೇಸರ ವ್ಯಕ್ತಪಡಿಸಿ ಶಿಕ್ಷಣ ಸಚಿವರಿಗೆ ಬಸವರಾಜ ಹೊರಟ್ಟಿ ಪತ್ರ

# ಪ್ರೌಢಶಾಲಾ ಶಿಕ್ಷಕರಿಗಿಲ್ಲ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹೊಣೆ



ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳ ಕೊಠಡಿ ಮೇಲ್ವಿಚಾರಕರಾಗಿ ಪ್ರೌಢಶಾಲಾ ಶಿಕ್ಷಕರನ್ನು ಬಳಸಿಕೊಳ್ಳದಿರಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ಧರಿಸಿರುವುದಕ್ಕೆ ಸಭಾಪತಿ ಬಸವರಾಜ ಹೊರಟ್ಟಿಯವರು ಬೇಸರ ವ್ಯಕ್ತಪಡಿಸಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಿಗೆ ಪತ್ರ ಬರೆದು, ಸದ್ಯದ ನಿರ್ಧಾರವನ್ನು ಪುನಃ ಪರಿಶೀಲಿಸಿ ಹಿಂಪಡೆಯಲು ಒತ್ತಾಯಿಸಿದ್ದಾರೆ.

ಶಿಕ್ಷಣ ಸಚಿವರಿಗೆ ಬರೆದ ಪತ್ರದಲ್ಲಿ, ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ(ರಿ) ಬೆಂಗಳೂರು ಜಿಲ್ಲಾ ಶಾಖೆ ದಕ್ಷಿಣ ಕನ್ನಡ ಹಾಗೂ ಅಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮೂಡಬಿದರೆ ಇವರ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರೀಯ ಕ್ರೀಡಾ ದಿನಾಚರಣೆ, ರಾಜ್ಯ ಮಟ್ಟದ ಶೈಕ್ಷಣಿಕ ಸಮಾವೇಶ, ದೈಹಿಕ ಶಿಕ್ಷಣ ಭೀಷ್ಮ ಮತ್ತು ಕರುನಾಡ ಕ್ರೀಡಾರತ್ನ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ತಮ್ಮ ಜೊತೆ ಪ್ರಸ್ತಾಪಿಸಿದಂತೆ ಈ ನಿರ್ಧಾರ ಖಂಡನೀಯ ಎಂದಿದ್ದಾರೆ.

ನಕಲು ಮಾಡಲು ವಿದ್ಯಾರ್ಥಿಗಳಿಗೆ ಪ್ರೌಢಶಾಲಾ ಶಿಕ್ಷಕರೇ ಸಹಕರಿಸಿರುವುದು ಪತ್ತೆಯಾಗಿದೆ ಎಂಬ ಕಾರಣ ನೀಡುತ್ತಾ, ಆ ಕಾರಣದಿಂದ ಪರೀಕ್ಷಾ ಮೇಲ್ವಿಚಾರಣಾ ಕಾರ್ಯ ನೀಡದಿರಲು ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ನಿರ್ಧರಿಸಿರುವುದು ಅವಸರದ ಕ್ರಮ ಎಂಬುದು ನನ್ನ ಭಾವನೆ. ಯಾರೋ ಕೆಲವು ಶಿಕ್ಷಕರು ತಪ್ಪು ಮಾಡಿದ್ದರೆ ನೇರವಾಗಿ ಅವರ ಮೇಲೆ ಕ್ರಮ ಕೈಗೊಳ್ಳಲು ಅಭ್ಯಂತರವಿಲ್ಲ. ಆದರೆ ಪ್ರೌಢಶಾಲಾ ಶಿಕ್ಷಕರ ಸಮೂಹವನ್ನು ಒಂದೇ ಪರಡಿಯಲ್ಲಿ ತೂಗಿ ಅರೋಪಿಸುವದನ್ನು ಒಪ್ಪಲಾಗದು. ಹಾಗೆಯೇ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಕೊಠಡಿ ಮೇಲ್ವಿಚಾರಕರಾಗಿ ನೇಮಕ ಮಾಡುವ ಕ್ರಮ ಹೊಸದೇನಲ್ಲ. ಆ ಪ್ರಯೋಗ ಈಗಾಗಲೇ ಆಗಿದೆ.



ಆಗ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದೂ ಇದೆ.

ಒಂದು ಶಾಲೆಯ ಶಿಕ್ಷಕರು ಬೇರೊಂದು ಶಾಲೆಯ ಪರೀಕ್ಷಾ ಕೇಂದ್ರಕ್ಕೆ ಮೇಲ್ವಿಚಾರಣೆಯ ಕರ್ತವ್ಯಕ್ಕೆ ಹೋಗುವುದು, ಒಂದು ಶಾಲೆಯ ಮಕ್ಕಳು ಬೇರೊಂದು ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯುವುದು, ಪ್ರಶ್ನೆ ಪತ್ರಿಕೆಗಳ ಮೇಲೆ ನಿಗಾವಹಿಸಲು ಕಸ್ಟೋಡಿಯನ್ ನೇಮಕ, ಪರಿಕ್ಷೆಯಲ್ಲಿ ನಕಲು ಮಾಡುವುದನ್ನು ತಡೆಯಲು ವಿಚಕ್ಷಕ ದಳ ರಚನೆ, ಪ್ರಶ್ನೆ ಪತ್ರಿಕೆ ಸೋರಿಕೆ ತಡೆಯಲು ಅನೇಕ ಆವೃತ್ತಿಯ ಪ್ರಶ್ನೋತ್ತರ ಪತ್ರಿಕೆಯನ್ನು ತಯಾರಿಸಿ ಜಾರಿಗೊಳಿಸಿದ್ದು, ಇವೆಲ್ಲ ಪ್ರಯೋಗಗಳನ್ನು ಮಾಡಿದರೂ ಕೂಡ ನಕಲು ಹಾವಳಿ ದ್ವಿಗುಣ ಅಗುತ್ತಲೇ ಇದೆ.

ಈ ಬಗ್ಗೆ ಗಂಭೀರ ಚಿಂತನೆ ಅಗತ್ಯವಿದೆ. ಹಾಗೆಯೇ ಇನ್ಯಾವುದೇ ಇಲಾಖೆಯ ನೌಕರರು ವಿಚಕ್ಷಕರಾಗಿ ಬರುವುದಾದರೆ ಅವರೆಲ್ಲ ಶಿಕ್ಷಕರಿಗಿಂತ ಹೆಚ್ಚು ಪ್ರಾಮಾಣಿಕರೆಂದು ಹೇಳಿದಂತಾಯ್ತು. ಹೀಗೆ ಅರ್ಥೈಸಿದರೆ ಇಡೀ ಶಿಕ್ಷಕ ಸಮುದಾಯನ್ನು ಅವಮಾನಿಸಿದಂತೆ. ಇಂದಿನ ವರದಿಯೇ ಹೇಳುವಂತೆ ಮೇಲಾಧಿಕಾರಿಗಳಿಂದ, ಆಡಳಿತ ಮಂಡಳಿಯ ಫಲಿತಾಂಶ ಹೆಚ್ಚಳದ ಒತ್ತಡವೇ ನಕಲಿಗೆ ಕಾರಣ. ಅಷ್ಟೇ ಅಲ್ಲ, ಹೇಗಾದರಾಗಲಿ ಮಕ್ಕಳ ಅಂಕಗಳು ಗರಿಷ್ಠತೆ ತಲುಪಬೇಕೆಂಬ ಪಾಲಕರ ಹಂಬಲ, ಮನೆ ಪಾಠ ಮಾಡುವವರು ಹೆಚ್ಚೆಚ್ಚು ಮಕ್ಕಳು ತಮ್ಮಲ್ಲೇ ಪ್ರವೇಶ ಪಡೆಯಬೇಕೆಂಬ ಬಯಕೆ, ನಕಲು ಮಾಡುವಾಗ ಶಿಕ್ಷಕರ ಗಮನಕ್ಕೆ ಬಂದರೂ ಏನೂ ಕ್ರಮ ಕೈಗೊಳ್ಳಲಾಗದ ಅಸಹಾಯಕ ಸ್ಥಿತಿ, ಬಾಹ್ಯ ಬೆದರಿಕೆ, ಶಿಕ್ಷಣ ಕ್ಷೇತ್ರದ ಅಧಿಕಾರಿಗಳು ತಮ್ಮ ತಾಲೂಕಿನ, ಜಿಲ್ಲೆಯ ಫಲಿತಾಂಶ ಕ್ರಮಾಂಕ ಉನ್ನತ ಸ್ಥರದಲ್ಲಿದ್ದು ಶಹಬಾಸ್‌ಗಿರಿ ಪಡೆಯಲು ಆಶಿಸುವುದು ಹೀಗೆ ಕಾರಣಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಇವೆಲ್ಲಕ್ಕೂ ಪರಿಹಾರ ಹುಡುಕದೆ ಕೇವಲ ಪ್ರೌಢಶಾಲಾ ಶಿಕ್ಷಕರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಸಮಾಜದಲ್ಲಿ ಅವರ ಗೌರವಕ್ಕೆ ಧಕ್ಕೆ ತರುವಂತೆ ನಿರ್ಧಾರ ಮಾಡಿರುವುದು ಖಂಡನಾರ್ಹ.

ಕನಿಷ್ಠ ಐದನೇ ವರ್ಗದಿಂದ ಕಡ್ಡಾಯ ಪಾಸು ಮಾಡುವ ನೀತಿಯನ್ನು ತೆಗೆದು ಮೊದಲಿನಿಂದಲೂ ಇದ್ದ ಅರ್ಹ ವಿದ್ಯಾರ್ಥಿಗಳು ಮಾತ್ರ ತೇರ್ಗಡೆ ಹೊಂದಿ ಮುಂದಿನ ವರ್ಗಕ್ಕೆ ಹೋಗುವಂತಾಗಬೇಕು. ಶಿಕ್ಷಕರ ಕೊರತೆ ನೀಗಬೇಕು ಹಾಗೂ ನಿಯಮಿತವಾಗಿ ಅರ್ಹ ಶಿಕ್ಷಕರ ನೇಮಕಾತಿ ಆಗಬೇಕು. ಕಾರಣ, ಪ್ರೌಢಶಾಲಾ ಶಿಕ್ಷಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸದ್ಯದ ನಿರ್ಧಾರವನ್ನು ಪುನಃ ಪರಿಶೀಲಿಸಲು ಹೊರಟ್ಟಿಯವರು ಕೋರಿದ್ದಾರೆ.

ಪಠ್ಯ ಬದಲಾದಂತೆ ಎಲ್ಲ ಶಿಕ್ಷಕರಿಗೆ ಪುನಶ್ಚೇತನ ತರಬೇತಿ ನೀಡಬೇಕು. ಅಧಿಕಾರಿಗಳು ಶಾಲಾ ತಪಾಸಣೆಯನ್ನು ಕಡ್ಡಾಯವಾಗಿ ಮಾಡುವ ಮೂಲಕ ಮಾರ್ಗದರ್ಶನ ನೀಡಬೇಕು. ನೆಪಮಾತ್ರಕ್ಕೆ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಮಾತ್ರ ವಿಶೇಷ ವರ್ಗಗಳನ್ನು ಹಮ್ಮಿಕೊಳ್ಳದೇ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಗಣನೆಗೆ ತೆಗೆದುಕೊಂಡು ತರಗತಿ ಕೋಣೆಯಲ್ಲಿ ಆಸಕ್ತಿದಾಯಕ ಪಾಠ ಬೋಧನೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ. ಒಟ್ಟಾರೆ ಬೀಸುವ ದೊಣ್ಣೆ ತಪ್ಪಿಸಲು ಅನುಸರಿಸುವ ಮಾರ್ಗ ನಕಲು ಎಂಬಂತಾಗಿದೆ. ಶಿಕ್ಷಣ ಇಲಾಖೆಯು ಪ್ರಾಮಾಣಿಕ ಕಾರ್ಯ ಮಾಡಿದಲ್ಲಿ ಪ್ರಾಮಾಣಿಕ ಸಮಾಜ ನಿರ್ಮಾಣ ಆಗಲು ಸಾಧ್ಯ ಎಂದು ಹೊರಟ್ಟಿಯವರು ಪತ್ರದಲ್ಲಿ ತಿಳಿಸಿದ್ದಾರೆ.

# ಪೋಕ್ಸೋ ಕಾಯಿದೆ ಅತ್ಯಂತ ಬಲಿಷ್ಠವಾಗಿದೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಮಕ್ಕಳ ಲೈಂಗಿಕ ದೌರ್ಜನ್ಯವು ವಿಶ್ವದಾದ್ಯಂತ ನಡೆಯುತ್ತಿದ್ದು, ಭಾರತವು ಇದಕ್ಕೆ ಹೊರತಾಗಿಲ್ಲ. ಮಕ್ಕಳ ಸರ್ವತೋಮುಖ ರಕ್ಷಣೆಯನ್ನು ಸಕ್ರಿಯಗೊಳಿಸಲು, ಭಾರತ ಸರ್ಕಾರವು 2012ರ 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ)' ಕಾಯಿದೆಯನ್ನು ಜಾರಿಗೊಳಿದೆ. ಈ ಕಾಯಿದೆಯು ಮಕ್ಕಳನ್ನು ರಕ್ಷಿಸಲು ವಿನ್ಯಾಸಗೊಳಿಸಲಾದ ಒಂದು ಬಲಿಷ್ಠ ಶಾಸನವಾಗಿದೆ ಎಂದು ವಿಷೇಶ ಸರ್ಕಾರಿ ವಕೀಲರಾದ ಅಮರೇಶ ಹಿರೇಮಠ ತಿಳಿಸಿದರು.



ಅವರು ರೋಟರಿ ಕ್ಲಬ್ ಗದಗ–ಬೆಟಗೇರಿ ಸಾಪ್ತಾಹಿಕ ಸಭೆಯಲ್ಲಿ ಮಾತನಾಡಿ, ಈ ಕಾಯಿದೆಯ ಬಗ್ಗೆ ಜನರಲ್ಲಿ, ಹೆಣ್ಣು ಮಕ್ಕಳಲ್ಲಿ ತಿಳುವಳಿಕೆ ನೀಡಿ, ಮಕ್ಕಳು ತಮಗಾದ ದೌರ್ಜನ್ಯವನ್ನು ಪಾಲಕರೊಂದಿಗೆ ಮತ್ತು ಕಾನೂನು ಪ್ರಾಧಿಕಾರದೊಂದಿಗೆ ಚರ್ಚಿಸಿ, ಅಪರಾಧ ಜರುಗಿದ ಕುರಿತು ವರದಿ ಮಾಡಿ ಕಿರುಕಳ ನೀಡಿದ ವ್ಯಕ್ತಿಗಳಿಗೆ ಶಿಕ್ಷೆ ಕೊಡಿಸಬೇಕೆಂದರು.

ಸಭೆಯ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಚಂದ್ರಮೌಳಿ ಜಾಲಿ ವಹಿಸಿದ್ದರು.

ಶ್ರೀಧರ ಸುಲ್ತಾನಪೂರ ಅತಿಥಿಗಳನ್ನು ಸಭೆಗೆ ಪರಿಚಯಿಸಿದರು. ಡಾ.ರಾಜೇಂದ್ರ ಗಚ್ಚಿನಮಠ, ವಿಶ್ವನಾಥ ಯಳಮಲಿ, ಡಾ. ಶೇಖರ ಡಿ.ಸಜ್ಜನರ, ಅಕ್ಷಯ ಶೆಟ್ಟಿ, ಶಿವಾಚಾರ್ಯ ಹೊಸಳ್ಳಿಮಠ, ಸಂತೋಷ ಅಕ್ಕಿ, ಡಾ. ಕೆ.ಬಿ ಧನ್ನೂರ, ಇಂಎಎಸ್ ಬ್ಯಾಳಿ, ಕಮಲಾಕ್ಷಿ ಅಂಗಡಿ, ಡಾ. ಆರ್.ಬಿ ಉಪ್ಪಿನ, ಆರ್.ಎಸ್ ಬುರಡಿ ಮುಂತಾದವರು ಉಪಸ್ಥಿತರಿದ್ದರು. ಕಾರ್ಯದರ್ಶಿ ವೀಣಾ ತಿರ್ಲಾಪೂರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಪದವಿಪೂರ್ವ ಕಾಲೇಜುಗಳ ತಾಲೂಕು ಮಟ್ಟದ ಕ್ರೀಡಾಕೂಟ

**■ವಿಜಯಸಾಕ್ಷಿ ಸುದ್ದಿ, ನರಗುಂದ**

ಯುವಪೀಳಿಗೆ ರಾಷ್ಟ್ರದ ಹಿತದೃಷ್ಟಿಯಿಂದ ದೈಹಿಕವಾಗಿ ಹಾಗೂ ಶೈಕ್ಷಣಿಕವಾಗಿ ಸದೃಡರಾಗಬೇಕಾಗಿದೆ. ಪ್ರಾಚೀನ ಕಾಲದ ಗುರುಕುಲಗಳಲ್ಲಿ ಶಿಕ್ಷಣದ ಜೊತೆಗೆ ಯೋಗಕ್ಕೆ ಮಹತ್ವವನ್ನು ನೀಡಲಾಗುತ್ತಿತ್ತು ಎಂದು ಲಯನ್ಸ್ ಕ್ಲಬ್ ಅಧ್ಯಕ್ಷ ಉಮೇಶಗೌಡ ಪಾಟೀಲ ಹೇಳಿದರು.



ಜಿಲ್ಲಾ ಪದವಿಪೂರ್ವ ಶಿಕ್ಷಣ ಇಲಾಖೆ ಹಾಗೂ ಶ್ರೀ ಯಡೆಯೂರ ಸಿದ್ಧಲಿಂಗೇಶ್ವರ ಸ್ವತಂತ್ರ ಪದವಿಪೂರ್ವ ಕಾಲೇಜು ಇವರ ಸಹಯೋಗದಲ್ಲಿ ತಾಲೂಕಾ ಕ್ರೀಡಾಂಗಣದಲ್ಲಿ ನಡೆದ ಪದವಿಪೂರ್ವ ಕಾಲೇಜುಗಳ 2023–24ನೇ ಸಾಲಿನ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಅವರು ಮಾತನಾಡಿದರು.

ಅಜ್ಜನಗೌಡ ಪಾಟೀಲ ಮಾತನಾಡಿ, ಶೈಕ್ಷಣಿಕವಾಗಿ ಬೆಳೆಯಲು ಉತ್ತಮವಾದ ಆರೋಗ್ಯವನ್ನು ಹೊಂದಿರಬೇಕು. ಆರೋಗ್ಯಕ್ಕೆ ಕ್ರೀಡೆ ಅವಶ್ಯವಾಗಿದೆ. ಸೋಲಿನಲ್ಲಿ ಕುಗ್ಗದೇ, ಗೆಲುವನ್ನು ಸಾಧಿಸಬೇಕು ಎಂದರು. ಅಂತಾರಾಷ್ಟ್ರೀಯ ಮಟ್ಟದ ಡಾಕ್ಟರೇಟ್ ಪದವಿ ಪಡೆದ ನಿವೃತ್ತ ದೈಹಿಕ ಶಿಕ್ಷಕ ಎಮ್.ಎಮ್ ಕಲಹಾಳ ಅವರನ್ನು ಸನ್ಮಾನಿಸಲಾಯಿತು.

ತಾಲೂಕು ಮಟ್ಟದ ಕ್ರೀಡಾ ಕೂಟದಲ್ಲಿ ನಗರದ ಲಯನ್ಸ್ ಪದವಿಪೂರ್ವ ಕಾಲೇಜು, ಎಸ್‌ವೈಎಸ್ ಪದವಿಪೂರ್ವ ಕಾಲೇಜು, ಸರಕಾರಿ ಪದವಿಪೂರ್ವ ಕಾಲೇಜು, ನವೋದಯ ಕಾಲೇಜು, ಚಿಕ್ಕನರಗುಂದ ಸರಕಾರಿ ಕಾಲೇಜು, ಬನಹಟ್ಟಿ ಸರಕಾರಿ ಕಾಲೇಜು, ಕೊಣ್ಣೂರ ಕೆಇಎಸ್ ಕಾಲೇಜು, ಶಿರೋಳದ ಸರ್ವೋದಯ ಕಾಲೇಜುಗಳು ಭಾಗವಹಿಸಿದ್ದವು.

ವೀರನಗೌಡ ಪಾಟೀಲ, ಎಮ್.ವ್ಹಿ ಪಾಟೀಲ, ಪುರಸಭೆ ಮಾಜಿ ಅಧ್ಯಕ್ಷ ಶಿವಾನಂದ ಮುತ್ತವಾಡ, ಪ್ರಭಾರಿ ಬಿಇಓ ಬಿ.ಎಫ್ ಮಜ್ಜಗಿ, ಎಮ್.ವಿ ಬೋಗಾರ, ಎನ್.ಆರ್ ನಿಡಗುಂದಿ, ಮಂಜುನಾಥ ಮೆಣಸಗಿ ಸೇರಿದಂತೆ ದೈಹಿಕ ಶಿಕ್ಷಕರು, ಶಾಲಾಕಾಲೇಜು ವಿದ್ಯಾರ್ಥಿಗಳು ಇದ್ದರು.

# ಬಿಬಿಎಂಪಿ ಮಾರ್ಗಸೂಚಿ: 'ಪ್ಲಾಸ್ಟರ್ ಆಫ್ ಪ್ಯಾರಿಸ್'ನಿಂದ ನಿರ್ಮಿಸಿದ ಗಣೇಶ ಮೂರ್ತಿಗೆ ಸಂಪೂರ್ಣ ನಿಷೇಧ!

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಗಣೇಶ ಚತುರ್ಥಿ ಹತ್ತಿರಬರುತ್ತಿದ್ದು, ಈ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಗಣೇಶ ಮೂರ್ತಿಗಳ ತಯಾರಿಕೆ, ಮಾರಾಟವನ್ನು ಸಂಪೂರ್ಣ ನಿಷೇಧಿಸಿದೆ.

ಗಣೇಶ ಹಬ್ಬ ಹತ್ತಿರ ಬರುತ್ತಿರುವ ಹಿನ್ನೆಲೆಯಲ್ಲಿ ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಅವರ ನೇತೃತ್ವದಲ್ಲಿ ನಿನ್ನೆ ಸಭೆ ನಡೆಯಿತು.



ಈ ವೇಳೆ ತುಷಾರ್ ಗಿರಿನಾಥ್ ಅವರು, ಹಬ್ಬಕ್ಕೆ ಪಾಲಿಕೆ ವತಿಯಿಂದ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರು. ಸಭೆಯಲ್ಲಿ ಕೆಲ ನಿರ್ಣಯಗಳನ್ನು ಕೈಗೊಳ್ಳಲಾಗಿತು.ಹಬ್ಬದ ಸಂದರ್ಭದಲ್ಲಿ ಶುಭ ಹಾರೈಸಿ ಬ್ಯಾನರ್ ಗಳ ಹಾಕಿ, ನಿಯಮ ಉಲ್ಲಂಘಿಸುವವರಿಗೆ ದಂಡ ವಿಧಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಅಲ್ಲದೆ, ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಣೆ ಮಾಡುವಂತೆ ನಿರ್ದೇಶನ ನೀಡಿದರು.

# ವಿಶ್ವವನ್ನೇ ತನ್ನತ್ತ ಸೆಳೆದ ಭಾಷೆ ಸಂಸ್ಕೃತ

**■ವಿಜಯಸಾಕ್ಷಿ ಸುದ್ದಿ, ಗದಗ**

ಜಗತ್ತಿನ ಎಲ್ಲ ದೇಶಗಳನ್ನು ಸೆಳೆದು, ವಿಜ್ಞಾನ ಲೋಕವನ್ನು ಆವರಿಸಿದ ಭಾಷೆ ಸಂಸ್ಕೃತವಾಗಿದೆ ಎಂದು ಇಸ್ರೋ ಮತ್ತು ನಾಸಾ ವಿಜ್ಞಾನಿಗಳು ಹೇಳಿದ್ದಾರೆ. ಅಂತಹ ಶ್ರೇಷ್ಠ ಭಾಷೆ ಸಂಸ್ಕೃತ. ಈ ದೇವಭಾಷೆಯನ್ನು ನಾವೆಲ್ಲರೂ ಉಳಿಸಿ ಬೆಳೆಸಬೇಕಿದೆ ಎಂದು ಹೇಮರಾಜ ಶಾಸ್ತ್ರಿಗಳು ಹೆಡಿಗೊಂಡ ತಿಳಿಸಿದರು.



ವಿಶ್ವ ಸಂಸ್ಕೃತ ದಿನಾಚರಣೆ ಹಾಗೂ ಗದಗ ಜಿಲ್ಲಾ ಸಂಸ್ಕೃತ ಶ್ರಾವಣಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಗರದ ಶ್ರೀ ಜಗದ್ಗುರು ಪಂಚಾಚಾರ್ಯ ವೇದ ಸಂಸ್ಕೃತ ಪಾಠಶಾಲೆಯಿಂದ ಪಾಠಶಾಲಾ ವಿದ್ಯಾರ್ಥಿಗಳು, ಶಿಕ್ಷಕರು ಸಂಸ್ಕೃತ ಘೋಷಣೆಗಳನ್ನು ಕೂಗುತ್ತಾ ಜನರಲ್ಲಿ ಜಾಗೃತಿ ಮೂಡಿಸಿದರು. ಮುಖ್ಯ ಅತಿಥಿಗಳಾಗಿ ವಿದ್ವಾನ್ ಜಿ.ಎಸ್. ಗಾಂವಕರ ಧಾರವಾಡ, ಎಸ್.ಎಸ್ ನೀಲಗುಂದ, ಪಂಚಯ್ಯ ಹಿರೇಮಠ, ಎಸ್.ಎಸ್ ಬಣಕಾರ, ವ್ಹಿ.ಸಿ ಪಟ್ಟಣಶೆಟ್ಟಿ, ಸುರೇಶ ಮಾದರ, ಮಹಾಂತೇಶ ಮಾದರ, ತೇಜಸ್ವಿನಿ ಕುರ್ತಕೋಟಿ ಕಳಕಪ್ಪ ಕುರ್ತಕೋಟಿ ಹಾಗೂ ಶ್ರೀ ಜಗದ್ಗುರು ತೋಟ–ದಾರ್ಯ ಸಂಸ್ಕೃತ ಪಾಠಶಾಲೆ, ಶ್ರೀ ಜಗದ್ಗುರು ಪಂಚಾಚಾರ್ಯ ವೇದ ಸಂಸ್ಕೃತ ಪಾಠಶಾಲೆ, ಶ್ರೀ ಡಿಜಿಎಂ ಸಂಸ್ಕೃತ ಪಾಠಶಾಲೆ, ಶ್ರೀ ಪಿಪಿಜಿ ಸಂಸ್ಕೃತ ಪಾಠಶಾಲೆ, ಶ್ರೀ ಬಿ.ಜಿ ಅಣ್ಣಿಗೇರಿ ಸಂಸ್ಕೃತ ಪಾಠಶಾಲೆಯ ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಬಾಗವಹಿಸಿದ್ದರು.

ಶಿವಮೂರ್ತಿ ಶಿಂಪಿಗೇರ ಸ್ವಾಗತಿಸಿದರು. ಗುರುಶಿದ್ದಯ್ಯ ಹಿರೇಮಠ ನಿರೂಪಿಸಿದರು. ಶಿವಚಲಕುಮಾರ ಸಾಲಿಮಠ ವಂದಿಸಿದರು.

## ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಶ್ರೀಗಳು

# ಭಾರತ ವಿಶ್ವದ ಗಮನವನ್ನು ತನ್ನತ್ತ ಸೆಳೆದಿದೆ



ಭಾರತ ಜಾಗತಿಕ ಮಟ್ಟದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂದುವರೆದಿರುವ ನಾಲ್ಕನೇ ರಾಷ್ಟ್ರವಾಗಿದೆ. ಚಂದ್ರಯಾನ–3 ವಿಜ್ಞಾನಿಗಳ ಸಾಧನೆಗೆ ಭಾರತೀಯರೆಲ್ಲರೂ ಹೆಮ್ಮೆ ಪಡುವಂತಾಗಿದೆ. ಇಸ್ರೋದಲ್ಲಿ ಗದುಗಿನ ನಾಲ್ವರು ವಿಜ್ಞಾನಿಗಳಿರುವುದು ಅಭಿಮಾನ ಮತ್ತು ಸಂತೋಷದ ಸಂಗತಿ. ಈ ಅಭೂತಪೂರ್ವ ಯಶಸ್ಸಿನಿಂದ ಭಾರತಕ್ಕೆ ವಿಶ್ವದಲ್ಲಿ ವಿಶೇಷ ಮನ್ನಣೆ ಲಭಿಸಿದೆ.

**– ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು.**

**■ವಿಜಯಸಾಕ್ಷಿ ಸುದ್ದಿ, ಗದಗ**

ವಿಕ್ರಮ್ ಲ್ಯಾಂಡರ್ ಚಂದ್ರನ ಮೇಲೆ ತಲುಪಿ ಪ್ರಗ್ಯಾನ್ ರೋವರ್ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದು ನಿಜಕ್ಕೂ ಅದ್ಭುತ ಘಟನೆ. ವಿಶ್ವದಲ್ಲಿಯೇ ಭಾರತ ಚಂದ್ರನ ದಕ್ಷಿಣ ಧ್ರುವದಲ್ಲಿ ಹೆಜ್ಜೆಯಿಟ್ಟ ಪ್ರಥಮ ದೇಶ. ವಿಶ್ವದ ಗಮನವನ್ನೇ ಭಾರತ ತನ್ನತ್ತ ಸೆಳೆದಿದೆ ಎಂದು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಲಿಂಗಾಯತ ಪ್ರಗತಿಶೀಲ ಸಂಘದ 2656ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು. ರಾಮಚಂದ್ರ ಮೋನೆ ಉಪನ್ಯಾಸ ನೀಡಿ, ಪ್ರಪಂಚದ ಅನೇಕ ರಾಷ್ಟ್ರಗಳು ಅಂತರಿಕ್ಷ ವಿಜ್ಞಾನದಲ್ಲಿ ನಮ್ಮ ದೇಶದಷ್ಟು ನೈಪುಣ್ಯತೆ ಹೊಂದಿಲ್ಲ. 2029ನೇ ವರ್ಷಕ್ಕೆ ಭಾರತ ಆರ್ಥಿಕವಾಗಿ ಬಲಿಷ್ಠ ರಾಷ್ಟ್ರವಾಗಲಿದೆ ಎಂದು ತಿಳಿಸಿ, ಬಾಹ್ಯಾಕಾಶ ವಿಜ್ಞಾನದ ಕುರಿತು ಅನೇಕ ವಿಷಯಗಳನ್ನು ತಿಳಿಸಿಕೊಟ್ಟರು.

ಸಿದ್ದು ಸತ್ಯಣ್ಣವರ ಮಾತನಾಡಿ, ಲಿಂಗೈಕ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದವರು. ನಾವು 30 ಜನರಿದ್ದು, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಬೆಳೆಯಲು ಶ್ರೀಗಳವರ ಪ್ರೋತ್ಸಾಹ ಮತ್ತು ಪ್ರಭಾವ ಕಾರಣ. ಅಂತಹ ಗುರುಗಳ ಹೆಸರಿನಲ್ಲಿ ಇಂದು ಸಾಹಿತ್ಯ ಪುರಸ್ಕಾರಕ್ಕೆ ಚಾಲನೆ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಡಂಬಳದಲ್ಲಿ ಅರ್ಥಪೂರ್ಣವಾಗಿ ಕಾರ್ಯಕ್ರಮವನ್ನು ಆಚರಿಸಲಾಗುವುದು ಎಂದು ತಿಳಿಸಿದರು.

ಪೂಜ್ಯ ಕಮಲಮ್ಮ ತಾಯಿ ಪ್ರವಚನ ನೀಡಿದರು. 2023ನೇ ಸಾಲಿನ ಡಾ. ತೋಂಟದ ಸಿದ್ಧಲಿಂಗಶ್ರೀ ಕಥಾ ಪುರಸ್ಕಾರವನ್ನು ಮಂಜು ನಾಯಕ ಚೆಳ್ಳೂರು ಇವರಿಗೆ ಪ್ರದಾನ ಮಾಡಲಾಯಿತು. ಇಂಡಿಯಾಸ್ ವರ್ಲ್ಡ್ ರೆಕಾರ್ಡ್ ಸಾಧಿಸಿದ ಬಾಲಪ್ರತಿಭೆ ಪರೀಕ್ಷಿತ ಶಿರೂರ ತನ್ನ ಪ್ರತಿಭೆ ಪ್ರದರ್ಶಿಸಿದನು.

ಗುರುನಾಥ ಸುತಾರ ತಂಡದವರು ವಚನ ಸಂಗೀತ ಹಾಡಿದರು. ಸೃಷ್ಟಿ ಎಂ. ಹಬೀಬ ಧರ್ಮಗ್ರಂಥ ಪಠಣಗೈದರು. ಮೇಧಾ ಎಸ್.ಹಂಡಿ ಇವರಿಂದ ವಚನ ಚಿಂತನ ನಡೆಯಿತು. ಲಿಂ. ಹೊನ್ನಪ್ಪಗೌಡ ಬಿರಾದಾರ, ಲಿಂ. ಲಕ್ಷ್ಮಿಬಾಯಿ ಬಿರಾದಾರ ಇವರ ಸ್ಮರಣಾರ್ಥ ಕುಟುಂಬ ವರ್ಗದವರು, ಚನ್ನಬಸಯ್ಯ ಶಿ.ಕನಕೇರಿಮಠ, ಗಿರಿಜಾದೇವಿ ಚ.ಕನಕೇರಿಮಠ, ರೇವಣ್ಣ ಚ.ಬ್ಯಾಕೋಡ ಇವರನ್ನು ಶ್ರೀಗಳು ಸನ್ಮಾನಿಸಿದರು.

ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ಬಾಹುಬಲಿ ಜೈನರ ಕಾರ್ಯಕ್ರಮ ನಿರೂಪಿಸಿದರು. ಬಾಲಚಂದ್ರ ಭರಮಗೌಡರ, ರೇಣುಕಾ ವಿ.ಕರೇಗೌಡ್ರ, ಮಹೇಶ ಗಾಣಿಗೇರ, ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಅಶೋಕ ಹಾದಿ, ಸುರೇಶ ನಿಲೂಗಲ್, ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

# ನವಜಾತ ಶಿಶುಗಳಿಗೆ ಆಂಬ್ಯುಲೆನ್ಸ್ ಸೇವೆ: ಟೆಲಿ–ಎನ್‌ಐಸಿ ಸೇವೆ ಆರಂಭಿಸಿದ ಸರ್ಕಾರ!

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ರಾಜ್ಯದಲ್ಲಿ ನವಜಾತ ಶಿಶುಗಳ ಆರೈಕೆ ಸೇವೆಗಳನ್ನು ಸುಧಾರಿಸುವ ಉದ್ದೇಶದಿಂದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಶುಕ್ರವಾರ ಬೆಂಗಳೂರಿನಲ್ಲಿ ಮಣಿಪಾಲ್ ಆಂಬ್ಯುಲೆನ್ಸ್ ರೆಸ್ಪಾನ್ಸ್ ಸೇವೆ – ನಿಯೋನಾಟಲ್ ಕೇರ್ ಆನ್ ವೀಲ್ಸ್ (ಮಾರ್ಸ್–ನೌ) ಗೆ ಚಾಲನೆ ನೀಡಿದರು.

ಬೆಂಗಳೂರು ಮತ್ತು ನಗರದ ಹೊರವಲಯದಲ್ಲಿ ನವಜಾತ ಶಿಶುಗಳ ಆರೈಕೆಗಾಗಿ ಈ ಆಂಬುಲೆನ್ಸ್ ಸೇವೆಗಳನ್ನು ಪ್ರಾರಂಭಿಸಲಾಗಿದೆ.

ಆಂಬುಲೆನ್ಸ್ ಗಳಲ್ಲಿ ಶಿಶು ಇನ್ಕ್ಯುಬೇಟರ್‌ಗಳು, ಹೃದಯ ಮತ್ತು ಶ್ವಾಸಕೋಶದ ಮಾನಿಟರ್‌ಗಳು, ಹೈ ಫ್ರೀಕ್ವೆನ್ಸಿ, ವೆಂಟಿಲೇಟರ್‌ಗಳು, ನೈಟ್ರಿಕ್ ಆಕ್ಸೈಡ್ ಅಡ್ಮಿನಿಸ್ಟ್ರೇಷನ್, ಬ್ಲಾಂಕೆಟ್ ವಾರ್ಮರ್‌ಗಳು ಮತ್ತು ಸುಗಮ ಪ್ರಯಾಣಕ್ಕಾಗಿ ಅಗತ್ಯ ಸೇವೆಗಳನ್ನು ಇರಿಸಲಾಗಿದೆ. ತುರ್ತು ಸಮಯದಲ್ಲಿ ಸೂಕ್ತ ಚಿಕಿತ್ಸೆ ನೀಡಿ ಮಕ್ಕಳ ಆರೋಗ್ಯ ಕಾಪಾಡಲು ಇದು ಸಹಾಯ ಮಾಡುತ್ತವೆ ಎಂದು ದಿನೇಶ್ ಗುಂಡೂರಾವ್ ಅವರು ಹೇಳಿದರು.

## ನೀವೂ ನಮ್ಮ ಜೊತೆ ಕೈಜೋಡಿಸಿ

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545

# ಅಪ್ರಾಮಾಣಿಕ ಆಡಳಿತವನ್ನು ಸರ್ಕಾರ ಸಹಿಸದು

▶▶ ಮೊದಲನೇ ಪುಟದಿಂದ

ಸರಿಯಾದ ಅರಿವು ಮೂಡಿಸುವ ಕಾರ್ಯವಾಗಬೇಕು ಎಂದರು. ಪಡಿತರ ಅಂಗಡಿಗಳ ಕುರಿತಂತೆ ತಾಲೂಕಿನಲ್ಲಿರುವ 49 ಹಳ್ಳಿಗಳಲ್ಲಿಯೂ ಸಹ ಸರ್ಕಾರದ ನಿಯಮಾನುಸಾರ ಪಡಿತರ ಅಂಗಡಿಗಳಾಗಬೇಕು ಎಂದು ತಿಳಿಸಿ, ಅಕ್ಟೋಬರ್ 2ರೊಳಗಾಗಿ ಪಡಿತರ ಅಂಗಡಿ ತೆರೆಯಲು ಸೂಚಿಸಿದರು.

ಸೆಪ್ಟೆಂಬರ್ 20ರೊಳಗಾಗಿ ಗೃಹಲಕ್ಷ್ಮೀ ಹಾಗೂ ಅನ್ನಭಾಗ್ಯ ಯೋಜನೆಯ ಉಳಿದ ಅರ್ಹ ಫಲಾನುಭವಿಗಳಿಗೆ ತಲುಪಿಸಲು ಆಗಿರುವ ಅಡಚಣೆ ನಿವಾರಿಸಿ ವರದಿ ಸಲ್ಲಿಸುವಂತೆ ತಿಳಿಸಿದರು.

ಸಭೆಯಲ್ಲಿ ಬಿತ್ತನೆ ಬೀಜ, ಗೊಬ್ಬರಗಳ ಸರಬರಾಜು, ವಿದ್ಯುತ್ ಸರಬರಾಜು, ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಕುರಿತಂತೆ ಪ್ರಗತಿ ಪರಿಶೀಲನೆ ನಡೆಸಲಾಯಿತು. ಆಡಳಿತ ವ್ಯವಸ್ಥೆ ಶಿಸ್ತುಬದ್ಧ ಹಾಗೂ ಬಿಗಿಯಾಗಿರಬೇಕು.

ಜನರ ಸಮಸ್ಯೆಗೆ ಸ್ಪಂದಿಸುವ ಮನೋಭಾವನೆಯನ್ನು ಅಧಿಕಾರಿಗಳು ಹೊಂದಬೇಕು ಎಂದು ಹೇಳಿದರು.

ಶಿರಹಟ್ಟಿ ತಾಲೂಕಿನ ಎಲ್ಲ ತಾಲೂಕಾ ಕಚೇರಿಗಳಲ್ಲಿ ಕಡ್ಡಾಯವಾಗಿ ಸಿಸಿ ಟಿವಿ ಹಾಗೂ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಜಾರಿಯಾಗಬೇಕು. ಈ ಮೂಲಕ ಜನಸಾಮಾನ್ಯರಿಗೆ ಪಾರದರ್ಶಕ ಆಡಳಿತ ಹಾಗೂ ಭ್ರಷ್ಟಾಚಾರ ಮುಕ್ತ ಆಡಳಿತ ತಲುಪಬೇಕು. ಜನಸಾಮಾನ್ಯರು ವಿನಾಕಾರಣ ಕಚೇರಿಗೆ ಅಲೆದಾಡುವುದನ್ನು ತಪ್ಪಿಸಬೇಕು.

ಈ ನಿಟ್ಟಿನಲ್ಲಿ ಸಿಸಿ ಟಿವಿ ಹಾಗೂ ಬಯೋಮೆಟ್ರಿಕ್ ಉಪಕರಣಗಳು ಅಗತ್ಯವಾಗಿವೆ ಎಂದರು. ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿ, ಕುಡಿಯುವ ನೀರಿನ ವ್ಯವಸ್ಥೆ, ಬಟ್ಟೂರು ಕೆರೆಗೆ ನೀರು ತುಂಬಿಸುವುದು ಸೇರಿದಂತೆ ಹಲವು ಸಮಸ್ಯೆಗಳ ಕುರಿತು ಸಚಿವರ ಗಮನಕ್ಕೆ ತರುವ ಮೂಲಕ ಪರಿಹಾರಕ್ಕೆ ಮುಂದಾದರು.

ಸಭೆಯಲ್ಲಿ ತಾಲೂಕು ಪಂಚಾಯತ್ ಆಡಳಿತಾಧಿಕಾರಿ ಎ.ಎ ಕಂಬಾಳಿಮಠ, ಉಪವಿಭಾಗಾಧಿಕಾರಿ ಡಾ. ವೆಂಕಟೇಶ ನಾಯ್ಕ, ಜಿಲ್ಲಾ ಪಂಚಾಯತ್ ಅಧಿಕಾರಿ ಚಳಗೇರಿ ಸೇರಿದಂತೆ ತಹಸೀಲ್ದಾರ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಮುಖ್ಯಸ್ಥರು, ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿ-ಸಿಬ್ಬಂದಿಗಳು ಹಾಜರಿದ್ದರು.

ಕಾನೂನು ಮಹಾವಿದ್ಯಾಲಯದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ವೈಶಾಲಿ ಎಂ.ಎಲ್

# ನಿರಂತರ ಅಧ್ಯಯನದಿಂದ ಪ್ರಭುದ್ಧತೆ ಹೊಂದಿ



■ ವಿಜಯಸಾಕ್ಷಿ ಸುದ್ದಿ, ಗದಗ

ಸಂವಿಧಾನವು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳನ್ನು ಒಳಗೊಂಡಿದೆ. ಈ ಮೂರು ಅಂಗಗಳಲ್ಲಿ ನ್ಯಾಯಾಂಗ ಶ್ರೇಷ್ಠವಾಗಿದೆ. ನ್ಯಾಯಾಂಗದ ನಿರಂತರ ಅಧ್ಯಯನದ ಮೂಲಕ ಅದರಲ್ಲಿ ಪ್ರಭುದ್ಧತೆ ಹೊಂದಲು ಸಾಧ್ಯ. ನ್ಯಾಯಾಂಗ ಕ್ಷೇತ್ರದಲ್ಲಿ ಹಿಡಿತ ಸಾಧಿಸಿದರೆ ಮಾತ್ರ ನೊಂದು-ಬೆಂದವರಿಗೆ ನ್ಯಾಯ ಕೊಡಿಸಲು ಸಾಧ್ಯ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಹೇಳಿದರು.

ಅವರು ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಕಾನೂನು ಮಹಾವಿದ್ಯಾಲಯದಲ್ಲಿ ಶನಿವಾರ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿ ಜೀವನ ಬಹು ಮುಖ್ಯವಾಗಿದೆ. ಆದ್ದರಿಂದ ಶೈಕ್ಷಣಿಕ ಪ್ರಗತಿಗೆ ಹೆಚ್ಚಿನ ಒತ್ತನ್ನು ನೀಡುವ ಮೂಲಕ ಉಜ್ವಲ ಭವಿಷ್ಯ ನಿರ್ಮಿಸಕೊಳ್ಳಬೇಕಿದೆ. ನಮ್ಮ ಭವಿಷ್ಯ ಉಜ್ವಲವಾದ ಮೇಲೆ ಸಾರ್ವಜನಿಕ ಮತ್ತು ಸಾಮಾಜಿಕ ಕೊಡುಗೆ ಕೊಡುವ ಪ್ರಮುಖ ಗುರುತರ ಜವಾಬ್ದಾರಿ ನಮ್ಮ ಮೇಲಿದೆ. ವಿದ್ಯಾರ್ಥಿಗಳು ಕಾನೂನು ಪದವಿಯ ನಂತರ ಸಾರ್ವಜನಿಕ ಆಡಳಿತ ಸೇವೆ ಸೇರಿದಂತೆ ಇನ್ನಿತರ ಕೇಂದ್ರ ಲೋಕಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆಗಳ ನಿರಂತರ ತಯಾರಿ ನಡೆಸಿ, ಉತ್ತಮ ಅಂಕಗಳೊಂದಿಗೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸಾರ್ವಜನಿಕ ವಲಯದ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುವಂತಾಗಲಿ ಎಂದು ಆಶಿಸಿದರು.

ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರವಿ ಮೂಲಿಮನಿ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಿಸಿ ಮಾತನಾಡಿ, ಕಾನೂನು ಪದವಿ ಹೊಂದಿದವರು ಜನತೆಗೆ ಕಾನೂನು ನೆರವು ನೀಡಲು ಮುಂದಾಗಬೇಕು ಎಂದು ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ನ್ಯಾಯವಾದಿ ಮೋಹನ ಭಜಂತ್ರಿ, ಸಂಸ್ಥೆಯ ವೈಸ್ ಚೇರಮನ್ ಎಸ್.ಕೆ ನದಾಫ ಉಪಸ್ಥಿತರಿದ್ದರು. ಪ್ರಾಚಾರ್ಯೆ ಪಲ್ಲವಿ ಎಸ್.ಬ್ಯಾಯಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಎಸ್.ಕೆ ಪಾಟೀಲ, ಡಿ.ಎಲ್ ಕುಲಕರ್ಣಿ, ಗುರುರಾಜ ಗೌರಿ, ಮಹಾಂತೇಶ ಕೊರಡಗೇರಿ, ವಿಶ್ವನಾಥ ಹಿರೇಮಠ, ಸಂತೋಷ ಬಿಂಗಿ, ಸಂಗೀತಾ ಪಾಟೀಲ, ನಸೀಮಾ ಮುಲ್ಲಾ, ಬಸಮ್ಮ, ನೀತಾ ಮಲ್ಲಿಕಾರ್ಜುನ, ವ್ಹಿ.ಎನ್ ತಿಮ್ಮನಗೌಡರ ಉಪಸ್ಥಿತರಿದ್ದರು. ಬೆಟ್ಟೇಶ ಹಾಗೂ ಸುಷ್ಮಾ ಪೊಲೀಸ್‌ಪಾಟೀಲ ನಿರೂಪಿಸಿದರು. ಶಫೀನಾ ರೋಣದ ವಂದಿಸಿದರು.

> ವಿದ್ಯಾರ್ಥಿ ಜೀವನದಲ್ಲಿ ನಾನು ಕೂಡ ಕಾನೂನು ಪದವಿಯ ಬಗ್ಗೆ ಆಸಕ್ತಿ ಹೊಂದಿದ್ದೆ. ಅದರಂತೆ ಕಾನೂನು ಪದವಿಯನ್ನು ಪಡೆದಿದ್ದೇನೆ. ನ್ಯಾಯವಾದಿಯಾಗಿ ಬಡವರ ಸೇವೆ ಮಾಡುವ ಬಯಕೆ ನನ್ನದಾಗಿತ್ತು. ಆದರೆ ಅದು ಸಾಧವಾಗಲಿಲ್ಲ. ಈಗ ಸಾರ್ವಜನಿಕ ಆಡಳಿತ ಸೇವೆಯ ಮೂಲಕ ಸೇವೆಯನ್ನು ಸಲ್ಲಿಸುತ್ತಿದ್ದೇನೆ. ಕಾನೂನು ಪದವೀಧರರಾದರೆ ಪ್ರಬಲವಾದ ಶಕ್ತಿಯನ್ನು ಹೊಂದಿದ ಆಡಳಿತ ಸೇವೆ ಮತ್ತು ಕರ್ನಾಟಕ ಆಡಳಿತ ಸೇವೆ ಸಲ್ಲಿಸುವಲ್ಲಿ ಚೌಕಟ್ಟಿದೆ. ಕಾನೂನು ಪದವಿಯನ್ನು ಸ್ವತಂತ್ರವಾಗಿ ಬಡವರ ಪರ, ನೊಂದವರ ಪರ ಹಾಗೂ ಸಮಾಜದ ಪರವಾಗಿ ಕೆಲಸ ಮಾಡಲು ಸಾಧ್ಯವಾಗಲಿದೆ.
>
> – ವೈಶಾಲಿ ಎಂ.ಎಲ್.
> ಜಿಲ್ಲಾಧಿಕಾರಿಗಳು, ಗದಗ.

# ಗ್ಯಾರಂಟಿ ಯೋಜನೆಗಳ ಪ್ರಗತಿ ವರದಿ

▶▶ ಮೊದಲನೇ ಪುಟದಿಂದ

ಮಾಡಲಾಗಿದೆ. 3114 ಪಡಿತರದಾರರಿಗೆ ಡಿಬಿಟಿ ಮೂಲಕ ಹಣ ವರ್ಗಾವಣೆ ಮಾಡಲು ಕೆಲವು ತಾಂತ್ರಿಕ ಸಮಸ್ಯೆಗಳಿಂದಾಗಿ ಸಾಧ್ಯವಾಗಿಲ್ಲ. ಅವುಗಳನ್ನು ಸರಿಪಡಿಸುವ ಕಾರ್ಯ ನಡೆದಿದೆ. ಈಗಾಗಲೇ 1800 ಪಡಿತರದಾರರಿಗೆ ಇರುವ ತಾಂತ್ರಿಕ ಸಮಸ್ಯೆ ಪರಿಹರಿಸಲಾಗಿದ್ದು, ಸೆಪ್ಟೆಂಬರ್ ಮಾಹೆಯ ಸಹಾಯಧನ ನೀಡಲಾಗುವುದು ಎಂದರು.

ಗೃಹಲಕ್ಷ್ಮೀ ಯೋಜನೆಯಡಿ ತಾಲೂಕಿನಲ್ಲಿ 25124 ಪಡಿತರ ಚೀಟಿದಾರರಿದ್ದಾರೆ. ಯೋಜನೆಯಡಿ 22,436 ಪಡಿತರದಾರರ ಅರ್ಜಿ ಸ್ವೀಕೃತಿಯಾಗಿದ್ದು, ಈ ಪೈಕಿ 22,367 ಪಡಿತರದಾರರಿಗೆ ಗೃಹಲಕ್ಷ್ಮೀ ಯೋಜನೆಗೆ ಮಂಜೂರಾತಿ ನೀಡಲಾಗಿದೆ. ಅವರೆಲ್ಲರಿಗೂ ತಲಾ 2000ರೂ.ನಂತೆ 4.47 ಕೋಟಿ ರೂ. ಪಾವತಿಸಲಾಗಿದೆ. ಇನ್ನೂ 2500 ಪಡಿತರ ಚೀಟಿ-ದಾರರಿಗೆ ಯೋಜನೆಯ ಸೌಲಭ್ಯ ತಲುಪಬೇಕಿದ್ದು, ಈ ಕಾರ್ಯವನ್ನು ಸೆಪ್ಟೆಂಬರ್ 20 ರೊಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಅಧಿಕಾರಿಗಳು ಮಾಹಿತಿ ಒದಗಿಸಿದರು.

# ಸೆ.9ರಂದು ರಾಷ್ಟ್ರೀಯ ಲೋಕ ಅದಾಲತ್

▶▶ ಮೊದಲನೇ ಪುಟದಿಂದ

ಗುರುತಿಸಲಾಗಿದೆ.

ಕಳೆದ ಜುಲೈ-23ರಂದ ಜರುಗಿದ ಲೋಕ ಅದಾಲತ್‌ನಲ್ಲಿ 2308 ಚಾಲ್ತಿ ಪ್ರಕರಣಗಳು, 6945 ವ್ಯಾಜ್ಯಪೂರ್ವ ಪ್ರಕರಣಗಳು ಸೇರಿದಂತ ಒಟ್ಟು 9253 ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಲಾಗಿದೆ. ಇದರಲ್ಲಿ ವಿಶೇಷವಾಗಿ 11 ಕೌಟುಂಬಿಕ ಪ್ರಕರಣಗಳನ್ನು ಬಗೆಹರಿಸಿ, ದಂಪತಿಗಳನ್ನು ಪುನಃ ಒಂದುಗೂಡಿಸಲಾಗಿದೆ ಎಂದು ತಿಳಿಸಿದರು.

ಈಗಾಗಲೇ ಸಂಬಂಧಪಟ್ಟ ಇಲಾಖೆಯ ಹಾಗೂ ನಿಗಮ ಮಂಡಳಿಗಳ ಅಧಿಕಾರಿಗೊಂದಿಗೆ ಪೂರ್ವಭಾವಿ ಸಭೆ ಜರುಗಿಸಿ ಹೆಚ್ಚಿನ ಪ್ರಕರಣಗಳನ್ನು ರಾಜೀ ಮೂಲಕ ಇತ್ಯರ್ಥ ಪಡಿಸಿಕೊಳ್ಳಲು ತಿಳಿಯಪಡಿಸಿದೆ. ಇದರ ಸದುಪಯೋಗ ಪಡೆದುಕೊಳ್ಳುವಂತೆ ಪ್ರಧಾನ ಮತ್ತು ಜಿಲ್ಲಾ ಸತ್ರ ನ್ಯಾಯಾದೀಶರಾದ ಬಸವರಾಜ ಅವರು ಕರೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಕೆ ಗುರುಪ್ರಸಾದ, ವಾರ್ತಾಧಿಕಾರಿ ವಸಂತ ಮಡ್ಲೂರ ಉಪಸ್ಥಿತರಿದ್ದರು.

> ಜಿಲ್ಲೆಯಲ್ಲಿ ಸೆ.9ರಂದು ಜರುಗಲಿರುವ ರಾಷ್ಟ್ರೀಯ ಲೋಕ ಅದಾಲತ್ ರಾಜಿ ಸಂಧಾನದಲ್ಲಿ ಪಾಲ್ಗೊಂಡು ತಮಗಾಗುವ ಆರ್ಥಿಕ ಹೊರೆ ಹಾಗೂ ಸಮಯ ಪೋಲಾಗುವುದನ್ನು ತಪ್ಪಿಸಬಹುದಾಗಿದೆ. ರಾಜಿ ಸಂಧಾನ ಪ್ರಕರಣ ಇತ್ಯರ್ಥವಾದರೆ ನ್ಯಾಯಲಕ್ಕೆ ತುಂಬಿದ ಶುಲ್ಕವನ್ನು ಸಂಪೂರ್ಣ ಮರುಪಾವತಿ ಮಾಡುವದರ ಜೊತೆಗೆ ಉಭಯ ಪಕ್ಷಗಾರರಿಗೆ ಮೇಲ್ಮನಿ ಸಲ್ಲಿಸಲು ಅವಕಾಶವಿರುವುದಿಲ್ಲ. ಇದರಿಂದಾಗಿ ಪ್ರಕರಣ ಮುಕ್ತಾಯಗೊಂಡು ತಮ್ಮ ಮೊದಲಿನ ಬಾಂಧವ್ಯ ಉಳಿಸಿಕೊಳ್ಳಲು ಸಹಾಯಕವಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಸವರಾಜ ತಿಳಿಸಿದರು.

ಅನ್ಮೋಲ್ ಯೋಗ ಮತ್ತು ಆಯುರ್ವೇದ ಚಿಕಿತ್ಸಾ ಕೇಂದ್ರದಲ್ಲಿ ರಕ್ಷಾ ಬಂಧನ

# ದೇಶದ ರಕ್ಷಣೆಯ ಕಾರ್ಯ ಎಲ್ಲಕ್ಕಿಂತ ಮಿಗಿಲು



■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಟ್ಟಣದ ಅನ್ಮೋಲ್ ಯೋಗ ಮತ್ತು ಆಯುರ್ವೇದ ಚಿಕಿತ್ಸಾ ಕೇಂದ್ರದಲ್ಲಿ ಪ್ರತಿ ವರ್ಷ ಪರಿಸರ ಸ್ನೇಹಿ ರಾಖಿಗಳನ್ನು ತಯಾರಿಸಿ ಅವುಗಳನ್ನು ಕಟ್ಟುವ ಮೂಲಕ ಆಚರಿಸುತ್ತಾ ಬರುತ್ತಿದ್ದು, ಗುರುವಾರ ಜರುಗಿದ ರಕ್ಷಾ ಬಂಧನ ಕಾರ್ಯಕ್ರಮದಲ್ಲಿ ಮಾಜಿ ಸೈನಿಕರಿಗೆ ರಾಖಿ ಕಟ್ಟುವ ಮೂಲಕ ರಕ್ಷಾ ಬಂಧನ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಪ್ರೊ. ಕಾವೇರಿ ಭೋಲಾ ಮಾತನಾಡಿ, ನಾವೆಲ್ಲರೂ ನಿತ್ಯ ನೆಮ್ಮದಿಯಿಂದ ಜೀವನ ನಡೆಸಲು ನಮ್ಮ ದೇಶದ ಗಡಿಯನ್ನು ಕಾಯುವ ಸೈನಿಕರು ಕಾರಣ. ನಿರಂತರವಾಗಿ ಗಡಿಯಲ್ಲಿ ನಿಂತು ದೇಶದ ರಕ್ಷಣೆ ಮಾಡುವ ಕಾರ್ಯ ಎಲ್ಲಕ್ಕಿಂತ ಮಿಗಿಲಾದುದು. ಅಂತಹ ಮಾಜಿ ಸೈನಿಕರನ್ನು ಗುರುತಿಸಿ, ಅವರಿಗೆ ರಾಖಿ ಕಟ್ಟುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಮಾಜಿ ಸೈನಿಕ ಬೆಟ್ಟಪ್ಪ ಮಾತನಾಡಿ, ಒಡಹುಟ್ಟಿದ ಅಣ್ಣ-ತಮ್ಮ, ಅಕ್ಕ-ತಂಗಿಯರ ಸಂಬಂಧಗಳೇ ಸರಿಯಾಗಿ ಉಳಿಯದಿರುವ ಇಂದಿನ ದಿನಗಳಲ್ಲಿ, ಅನ್ಮೋಲ್ ಯೋಗ ಕೇಂದ್ರದ ಡಾ.ಮಂಗಳಾ ಇಟಗಿಯವರು ನಮ್ಮನ್ನೆಲ್ಲ ಕರೆದು ಸಹೋದರ-ಸಹೋದರಿಯರ ಬಾಂಧವ್ಯ ಬೆಸೆಯುವ ರಾಖಿಯನ್ನು ಕಟ್ಟುತ್ತಿರುವುದು ಸಂತೋಷವನ್ನುಂಟುಮಾಡಿದೆ ಎಂದರು.

ಯೋಗ ಕೇಂದ್ರದ ನಿರ್ದೇಶಕಿ ಡಾ.ಮಂಗಳಾ ಇಟಗಿ ಮಾತನಾಡಿ, ತಮ್ಮ ಸಂಸ್ಥೆಯಿಂದ ಅನೇಕ ವರ್ಷಗಳಿಂದ ಪರಸರ ಸ್ನೇಹಿ ರಾಖಿಗಳನ್ನು ತಯಾರಿಸಿ ಅವುಗಳನ್ನೇ ಬಳಸಲಾಗುತ್ತಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಸುರೇಶ ಬೆಟಗೇರಿ, ಯೋಗ ಪರಿವಾರದ ಸದಸ್ಯ ಡಾ.ನಿಂಗು ಸೊಲಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಮಾಜಿ ಸೈನಿಕರಾದ ಎಸ್.ಎಸ್ ಚೆನ್ನಳ್ಳಿ, ಸುರೇಶಪ್ಪ ವಕ್ಕಲದ, ರವಿ ಗಡಾದ, ಶರಣಪ್ಪ ಎಚ್, ಮುತ್ತಣ್ಣ ಹೊಸಮನಿ, ಎಚ್. ಎಸ್ ಕಿನ್ನಾಳ, ದೊಡ್ಡನಗೌಡ ಹಿರೇಗೌಡ್ರ, ಈರಪ್ಪ ಚಳಗೇರಿ, ಯೋಗ ಪರಿವಾರದ ನಾಗಪ್ಪ ಇಟಗಿ, ರವೀಂದ್ರಗೌಡ ಪಾಟೀಲ, ರಜನೀಕಾಂತ ದೇಸಾಯಿ, ಶಿವು ಭೂಮರಡ್ಡಿ, ಎಂ.ಪಿ ಶೀರನಹಳ್ಳಿ, ಡಾ.ಚಂದ್ರಕಾಂತ ಇಟಗಿ, ಸಹನಾ ಶಿದ್ಲಿಂಗ, ಅನ್ನಪೂರ್ಣ ದೇಸಾಯಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ರೈತರ ಅಭಿವೃದ್ಧಿಯಿಂದ ಸಹಕಾರ ಸಂಘದ ಬೆಳವಣಿಗೆ ಸಾಧ್ಯ



■ ವಿಜಯಸಾಕ್ಷಿ ಸುದ್ದಿ, ರೋಣ

ರೈತರ ಅಭಿವೃದ್ಧಿಯಿಂದ ಮಾತ್ರ ಸಹಕಾರ ಸಂಘದ ಬೆಳವಣಿಗೆ ಸಾಧ್ಯ ಎಂದು ತಾ.ಪಂ ಮಾಜಿ ಸದಸ್ಯ ಹಾಗೂ ಗಜೇಂದ್ರಗಡ ಹಾಲುಮತ ಸಮಾಜದ ತಾಲೂಕಾಧ್ಯಕ್ಷ ಅಂದಪ್ಪ ಬಿಚ್ಚೂರ ಹೇಳಿದರು.

ಅವರು ಶುಕ್ರವಾರ ನಿಡಗುಂದಿ ಗ್ರಾಮದ ಕೃಷಿ ಪತ್ತಿನ ಸಹಕಾರಿ ಸಂಘದ ಚುನಾವಣೆಯಲ್ಲಿ 12 ಸ್ಥಾನಗಳಲ್ಲಿಯೂ ಜಯ ಗಳಿಸಿದ ಕಾಂಗ್ರೆಸ್ ಬೆಂಬಲಿತ ಸದಸ್ಯರನ್ನುದ್ದೇಶಿಸಿ ಮಾತನಾಡಿದರು.

ಸಹಕಾರಿ ಸಂಘಗಳು ರೈತರ ಪ್ರಗತಿಗೆ ಯೋಜನೆಗಳನ್ನು ರೂಪಿಸಬೇಕು. ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸರ್ವ ಸದಸ್ಯರು ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸಿದಾಗ ಮಾತ್ರ ಸಹಕಾರ ಸಂಘದ ಬೆಳವಣಿಗೆಗೆ ಸಾಧ್ಯವಾಗುತ್ತದೆ ಎಂದ ಅವರು, ಶಾಸಕ ಜಿ.ಎಸ್ ಪಾಟೀಲರ ಕಾರ್ಯವೈಖರಿಯನ್ನು ಮೆಚ್ಚಿಕೊಂಡು ರೈತ ಮತದಾರರು 12 ಸ್ಥಾನಗಳಲ್ಲಿಯೂ ಕಾಂಗ್ರೆಸ್ ಬೆಂಬಲಿತ ಸದಸ್ಯರನ್ನು ಆಯ್ಕೆಮಾಡಿದ್ದಾರೆ ಎಂದರು.

ಗ್ರಾಮದ ಸಹಕಾರಿ ಸಂಘದಲ್ಲಿ 12 ಸ್ಥಾನಗಳಿದ್ದು, ಎಸ್ಸಿ-ಎಸ್ಟಿ ಸ್ಥಾನದ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಗೊಂಡಿದ್ದರು. ಉಳಿದ 10 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಅಂದಪ್ಪ ತಳವಾರ, ಬಸವರಾಜ ಭಜಂತ್ರಿ, ಶೇಖಪ್ಪ ಕೊಪ್ಪದ, ಶೇಖಪ್ಪ ಜಮಾದಾರ, ಶಂಕ್ರಯ್ಯ ಹಿರೇಮಠ, ರಮೇಶ ಅಣಗೌಡ್ರ, ವೀರಭದ್ರಪ್ಪ ರೊಟ್ಟಿ, ಶರಣಪ್ಪ ಸೊಬಗಿನ, ಸಂಗವ್ವ ಬಾಗಲಿ, ರೇಣವ್ವ ಬಾಗಲಿ, ಬಾಳವ್ವ ಬಿಚ್ಚೂರ, ಮುದಕಪ್ಪ ಬೆಟಗೇರಿ ಸಹಕಾರಿ ಸಂಘದ ಸದಸ್ಯರಾಗಿ ಆಯ್ಕೆಯಾದರು.

ಮುಖಂಡರಾದ ಶಿವಣ್ಣ ಸೂಡಿ, ವೀರಪ್ಪ ಬಿಚ್ಚೂರ, ಅಂದಪ್ಪ ಚಲವಾದಿ, ಪಕ್ಕಿರಪ್ಪ ಕುಕನೂರ, ಎಸ್.ಎ ಹೊಟ್ಟಿನ, ರಾಜು ಬಾಣದ, ಬಾಬು ಮುಲ್ಲಾ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

# ನಿಧಿ ಆಸೆಗಾಗಿ ದೇವಸ್ಥಾನದಲ್ಲಿ ಗುಂಡಿ ಅಗೆದ ಕಳ್ಳರು

▶▶ ಮೊದಲನೇ ಪುಟದಿಂದ

ಅಗೆಯಲಾಗಿದ್ದು, ದೇವಸ್ಥಾನದ ಮುಂದೆ ಅಗೆದಿರುವ ಮಣ್ಣಿನ ರಾಶಿ ಹಾಕಲಾಗಿದೆ.

ನೂಲು ಹುಣ್ಣಿಮೆ ದಿನ ರಾತ್ರಿ ಈ ಪ್ರಕರಣ ನಡೆದಿದ್ದು, ಅರ್ಚಕರು ಮುಂಜಾನೆ ಪೂಜೆ ನೆರವೇರಿಸಲು ತೆರಳಿದಾಗ ಕೃತ್ಯ ಗಮನಕ್ಕೆಎ ಬಂದಿದೆ. ನಿಧಿ ಆಸೆಗಾಗಿ ಕಳ್ಳರು ಇಂತಹ ಕೃತ್ಯವನ್ನು ಎಸಗಿರಬಹುದು ಎಂದು ದೇವಸ್ಥಾನದ ಅರ್ಚಕ ಶಿದ್ರಾಮಯ್ಯ ಮಾಯಾಕರಮಠ ತಿಳಿಸಿದ್ದು, ಕಳೆದ ಎರಡು ವರ್ಷಗಳ ಹಿಂದೆ ಇದೇ ದೇವಸ್ಥಾನದಲ್ಲಿ ಇಂತಹ ಪ್ರಕರಣ ನಡೆದಿತ್ತು.

ಈ ಕುರಿತು ಗದಗ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದೆ ಎಂದು ಅರ್ಚಕರು ತಿಳಿಸಿದ್ದಾರೆ.

ಸೋಮನಕಟ್ಟಿ ಪ್ರದೇಶವೆಂದು ಹೇಳಲಾಗುತ್ತಿರುವ ಇಲ್ಲಿ, ನೂರಾರು ವರ್ಷಗಳ ಹಿಂದೆ ಜನ ವಸತಿಯಿತ್ತು. ಇಲ್ಲಿನ ಕಲಾತ್ಮಕ ಕೆತ್ತನೆಯ ಈ ಸೋಮೇಶ್ವರ ದೇವಸ್ಥಾನವು ಅಂದಿನಿಂದಲೇ ಪೂಜೆಗೊಳ್ಳುತ್ತಿದೆ. ಇದರ ಕೂಗಳತೆಯ ದೂರದಲ್ಲಿ ಮಾರುತಿ ದೇವಸ್ಥಾನವೂ ಇದೆ. ದೇವಸ್ಥಾನಕ್ಕೆ ರಕ್ಷಣಾ ಕವಚ ಒದಗಿಸಬೇಕೆಂದು ಸಮಾಜ ಸೇವಕ ಮರಿಯಪ್ಪ ವಡ್ಡರ ಹಾಗೂ ಸಾರ್ವಜನಿಕರ ಒತ್ತಾಯವಾಗಿದೆ.

# ಇಂದು ಮಹಾತ್ಮಾಗಾಂಧಿ ಹಾಕಿ ಕ್ರೀಡಾಂಗಣ ಉದ್ಘಾಟನೆ

▶▶ ಮೊದಲನೇ ಪುಟದಿಂದ

ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರಾದ ಎನ್. ಶಶಿಕುಮಾರ್ ಆಗಮಿಸುವರು.

ಇದೇ ಸಂದರ್ಭದಲ್ಲಿ ಅಂತರಾಷ್ಟ್ರೀಯ ಹಾಕಿ ಕ್ರೀಡಾಪಟುಗಳಾದ ರಾಜು ಬಗಾಡೆ, ಹರೀಶ ಮುಟಗಾರ, ಹಿರಿಯ ಹಾಕಿ ಕ್ರೀಡಾಪಟುಗಳಾದ ಹನುಮಂತಪ್ಪ ವೀರಾಪೂರ, ಗಂಗಣ್ಣ ಕೋಟಿ, ರಘುನಾಥಸಾ ಶಿದ್ಲಿಂಗ್, ಯಲ್ಲಪ್ಪ ಗಡಾದ, ಯಲ್ಲಪ್ಪ ಕೊರವರ, ವಿ.ಎಸ್. ಮಣಿ, ಕಾರ್ಲಟನ್ ಗೋವ್ಸ್ ಅವರನ್ನು ಸನ್ಮಾನಿಸಲಾಗುವುದು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಶರಣು ಗೋಗೇರಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ, ಲೋಕೋಪಯೋಗಿ ಇಲಾಖೆಯ ಕಾರ್ಯ ನಿರ್ವಾಹಕ ಅಭಿಯಂತರರಾದ ವಿ.ಎಸ್.ಪಾಟೀಲ ಸರ್ವರಿಗೂ ಸ್ವಾಗತ ಕೋರಿದ್ದಾರೆ.

ಹಾಕಿ ಕ್ರೀಡಾಂಗಣ ಉದ್ಘಾಟನಾ ಸಮಾರಂಭದ ನಿಮಿತ್ತ ಸೆಪ್ಟೆಂಬರ್ 3 ರಿಂದ 5 ರವರೆಗೆ ಹಾಕಿ ಪಂದ್ಯಾವಳಿಗಳು ಜರುಗಲಿವೆ. ಪಂದ್ಯಾವಳಿಗಳಲ್ಲಿ ಗದಗ-ಬೆಟಗೇರಿಯ ಹನುಮಾನ ಬ್ಲೇಸಿಂಗ್ ಸ್ಪೋರ್ಟ ಕ್ಲಬ್, ಬೆಂಗಳೂರಿನ ಕರ್ನಾಟಕ ರಾಜ್ಯ ಪೊಲೀಸ್ ತಂಡ, ಹುಬ್ಬಳ್ಳಿ ಸೌಥ್ ವೆಸ್ಟರ್ನ್ ರೈಲ್ವೆ ತಂಡ, ಹುಬ್ಬಳ್ಳಿಯ 11 ತಂಡ, ಬೆಂಗಳೂರಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಎ ಮತ್ತು ಬಿ ತಂಡಗಳು ಭಾಗವಹಿಸಲಿವೆ.

ಗೆಳೆಯರ ಬಳಗದಿಂದ ಸನ್ಮಾನ ಸ್ವೀಕರಿಸಿದ ಡಾ. ಜಿ.ಕೆ ಕಾಳೆ

# ಸಮಾಜದ ಋಣ ನನ್ನ ಮೇಲಿದೆ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನರೇಗಲ್ಲದ ಸಮಸ್ತ ಸಮಾಜದ ಋಣ ನನ್ನ ಮೇಲಿದೆ. ನನ್ನ ಕೈಲಾದ ಮಟ್ಟಿಗೆ ಸಮಾಜ ಸೇವೆ ಮಾಡುತ್ತ ಋಣ ಮುಕ್ತನಾಗಲು ಪ್ರಯತ್ನಿಸುತ್ತಿದ್ದೇನೆ. ನನ್ನ ಮೈಯಲ್ಲಿ ಶಕ್ತಿ ಇರುವವರೆಗೂ ನನ್ನ ವೈದ್ಯಕೀಯ ಸೇವೆಯನ್ನು ಮಾಡುತ್ತೇನೆ ಎಂದು ಡಾ. ಜಿ.ಕೆ ಕಾಳೆ ಹೇಳಿದರು.

ಐಎಂಎ ವತಿಯಿಂದ ರಾಷ್ಟ್ರೀಯ ಅಧ್ಯಕ್ಷರ ಪ್ರಶಂಸನಾ ಗೌರವ ಪ್ರಶಸ್ತಿಯನ್ನು ಸ್ವೀಕರಿಸಿದ್ದಕ್ಕಾಗಿ ಗೆಳೆಯರ ಬಳಗದವರು ಅವರ ಮನೆಯಲ್ಲಿ ನೀಡಿದ ಸನ್ಮಾನವನ್ನು ಸ್ವೀಕರಿಸಿ ಅವರು ಮಾತನಾಡಿದರು.

ಕಳೆದ 45 ವರ್ಷಗಳಿಂದ ನರೇಗಲ್ಲದಲ್ಲಿ ನಾನು ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದೇನೆ. ಈ ಸೇವೆಯಲ್ಲಿ ನನ್ನ ದಿವಂಗತ ಮಡದಿ, ಮಕ್ಕಳು ಹಾಗೂ ಸೊಸೆಯಂದಿರು ಕೈ ಜೋಡಿಸಿದ್ದಾರೆ. ಈ ಸಂದರ್ಭದಲ್ಲಿ ನನ್ನ ಬಳಿಗೆ ಬಂದ ರೋಗಿಗಳೆಲ್ಲರನ್ನೂ ದೇವರ ಸಮಾನವೆಂದು ತಿಳಿದೇ ಚಿಕಿತ್ಸೆ ನೀಡಿದ್ದೇನೆ, ನೀಡುತ್ತಿದ್ದೇವೆ. ನನ್ನ ಜೀವನದ ಎಲ್ಲ ಸಂದರ್ಭಗಳಲ್ಲಿಯೂ ಸಮಾಜ ನನ್ನೊಂದಿಗೆ ನಿಂತು ನನಗೆ ಶಕ್ತಿ ತುಂಬಿದೆ. ಇದನ್ನು ನನ್ನ ಕೊನೆಯ ಉಸಿರು ಇರುವರೆಗೂ ಮರೆಯಲಾರೆ ಎಂದರು.

ಸಭೆಯನ್ನುದ್ದೇಶಿಸಿ ಡಾ. ನಾಗರಾಜ ಗ್ರಾಮಪುರೋಹಿತ, ಮುಖ್ಯ ಶಿಕ್ಷಕ ಸುನೀಲ ಅಂಬೇಕರ, ರಾಜಶ್ರೀ ಕುಲಕರ್ಣಿ, ಅರ್ಚನಾ ಕುಲಕರ್ಣಿ, ಗುರುರಾಜ ಕುಲಕರ್ಣಿ, ಡಾ. ಕೃಷ್ಣ ಕಾಳೆ ಮಾತನಾಡಿದರು.

ಮಾರನಬಸರಿಯ ವಿಶ್ವನಾಥಭಟ್ಟ ವೈದ್ಯ ಸಾನ್ನಿಧ್ಯ ವಹಿಸಿದ್ದರು. ಶ್ರೀಪಾದಭಟ್ಟ ಜೋಷಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ಶೇಷಣ್ಣ ಕುಲಕರ್ಣಿ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಶಿವಣ್ಣ ಕುಲಕರ್ಣಿ, ವಿನಾಯಕ ಗ್ರಾಮಪುರೋಹಿತ, ಆರ್.ಡಿ ಕುಲಕರ್ಣಿ, ಎ.ಜಿ ಕುಲಕರ್ಣಿ, ವೀರಣ್ಣ ಹಳ್ಳಿಕೇರಿ, ಪ್ರಶಾಂತ ಗ್ರಾಮಪುರೋಹಿತ, ದತ್ತಣ್ಣ ಗ್ರಾಮಪುರೋಹಿತ, ಆದರ್ಶ ಕುಲಕರ್ಣಿ, ಸುಹಾಸ ಕುಲಕರ್ಣಿ, ಅರುಣ ಗ್ರಾಮಪುರೋಹಿತ, ಕಿರಣ ಕಾಳೆ, ನಾಗೇಶಭಟ್ಟ ಗ್ರಾಮಪುರೋಹಿತ, ಆಸ್ಪತ್ರೆಯ ಸಿಬ್ಬಂದಿ ವರ್ಗದವರಿದ್ದರು. ಪಲ್ಲವಿ ಗ್ರಾಮಪುರೋಹಿತ ಪ್ರಾರ್ಥಿಸಿದರು. ನಿವೃತ್ತ ಉಪನ್ಯಾಸಕ ಎಸ್.ಎಚ್ ಕುಲಕರ್ಣಿ ನಿರೂಪಿಸಿದರು. ಆನಂದ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಸಪ್ನಾ ಕಾಳೆ ವಂದಿಸಿದರು.

> ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಮಾತನಾಡಿ, ಡಾ. ಕಾಳೆಯವರು ಗ್ರಾಮೀಣ ಭಾಗದ ಜನರ ಸಂಜೀವಿನಿಯಾಗಿದ್ದಾರೆ. ಕೈ ಬಿಟ್ಟು ಹೋಗಿವೆ ಎಂದುಕೊಂಡ ಅದೆಷ್ಟೋ ರೋಗಿಗಳನ್ನು ಉಳಿಸಿದ ವೈದ್ಯರಾಗಿದ್ದಾರೆ. ಕೆಲವು ಸಂದರ್ಭಗಳಲ್ಲಿ ಡಾ. ಕಾಳೆಯವರು ನಿಷ್ಠುರವಾಗಿ ಮಾತನಾಡಿದರೂ ಅದರಲ್ಲಿ ಆ ವ್ಯಕ್ತಿಯ ಹಿತ ಅಡಗಿರುತ್ತದೆ. ಅವರ ಸೇವೆ ಇನ್ನೂ ನರೇಗಲ್ಲ ಮತ್ತು ಸುತ್ತಲಿನ ಭಾಗದ ಜನರಿಗೆ ಅತ್ಯಾವಶ್ಯಕವಾಗಿದ್ದು, ಶ್ರೀ ದತ್ತಾತ್ರೇಯನು ಅವರಿಗೆ ಆಯುರಾರೋಗ್ಯವನ್ನು ಕೊಟ್ಟು ರಕ್ಷಿಸಲಿ ಎಂದು ಹಾರೈಸಿದರು.

# ಹಾಲಪ್ಪ ಆಚಾರ್ ಗನ್‌ಮ್ಯಾನ್ ವಿರುದ್ಧ ಎಫ್‌ಐಆರ್

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ವಂಚನೆ ಆರೋಪದಡಿ ಮಾಜಿ ಗಣಿ ಮತ್ತು ಭೂವಿಜ್ಞಾನ ಸಚಿವ ಹಾಲಪ್ಪ ಆಚಾರ್ ಅವರ ಗನ್‌ಮ್ಯಾನ್ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಗುತ್ತಿಗೆ ಕೊಡಿಸುವುದಾಗಿ ಭರವಸೆ ನೀಡಿದ ಗನ್ ಮ್ಯಾನ್ ರಾಘವೇಂದ್ರ 10 ಲಕ್ಷ ರೂಪಾಯಿ ವಂಚಿಸಿದ್ದಾರೆ ಎಂದು ದಾವಣಗೆರೆ ಮೂಲದ ಗುತ್ತಿಗೆದಾರ ಹೆಚ್ ರಾಜು ನಾಯ್ಕ್ ಆರೋಪಿಸಿದ್ದಾರೆ.


ಕರ್ನಾಟಕ ಸರ್ಕಾರ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಾರ್ಯಾಲಯ (ಜಿಲ್ಲಾ ಪಂಚಾಯತ್), ನರಗುಂದ -582207, ಜಿಲ್ಲೆ: ಗದಗ,

Phone No: 08377-295260 E-mail : sadh.nargund@yahoo.com

ಕ್ರ.ಸಂ.ಸತೋನಿ/ಜಿಪಂ/ನರ/2023-24 ದಿನಾಂಕ : 01-09-2023

**ವಾಹನ ಬಾಡಿಗೆ ಟೆಂಡರ್ ಪ್ರಕಟಣೆ**

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಲ್ಲಾ ಪಂಚಾಯತ್) ನರಗುಂದ ಕಚೇರಿಗೆ 2023-24 ನೇ ಸಾಲಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಟಾಟಾ ಬೋಲ್ಟ್/ ಟಾಟ ಜೆಸ್ಟ್/ ಸ್ವಿಫ್ಟ ಒಂದು ವಾಹನ ಒದಗಿಸಲು ಮೊಹರಾದ ಲಕೋಟೆಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ ಮೊತ್ತ ರೂ. **10,000/-,** ಖಾಲಿ ಟೆಂಡರ್ ಫಾರ್ಮ ಬೆಲೆ ಪ್ರತಿ ಒಂದಕ್ಕೆ ರೂ. **500/-** ಇದ್ದು ದಿನಾಂಕ : **05.09.2023** ರಿಂದ ದಿನಾಂಕ : **07.09.2023** ರವರೆಗೆ ಕಚೇರಿಯಲ್ಲಿ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರ್ಮ ಸಲ್ಲಿಸಲು ದಿನಾಂಕ : **12.09.2023** ಮಧ್ಯಾಹ್ನ 3 ಗಂಟೆವರೆಗೆ ಅವಕಾಶವಿದೆ. ದಿನಾಂಕ : **13.09.2023** ರಂದು ಹಾಜರಿದ್ದ ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯನ್ನು (ದೂ. **08377-295260**) ಸಂಪರ್ಕಿಸಬಹುದು.

**ಸಹಿ/- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್) ನರಗುಂದ.**

ವಾಸಾಸಂಇ/ಗದಗ/ಕೆಎಸ್ಎಂಸಿಎ/154/2023-24

### ಮಹಾತ್ಮಾ ಗಾಂಧಿ ಹಾಕಿ ಕ್ರೀಡಾಂಗಣ, ಈಜುಕೊಳ ಲೋಕಾರ್ಪಣೆ ಕಾರ್ಯಕ್ರಮ ಇಂದು

# ಜಿಲ್ಲೆಯ ಯುವ ಪ್ರತಿಭೆಗಳಿಗೆ ವೇದಿಕೆಯಾದ ಹಾಕಿ ಕ್ರೀಡಾಂಗಣ





**■ವಿಜಯಸಾಕ್ಷಿ ಸುದ್ದಿ, ಗದಗ**

ಭಾರತದ ರಾಷ್ಟ್ರೀಯ ಕ್ರೀಡೆಯಾದ ಹಾಕಿ ಕ್ರೀಡೆಯನ್ನು ಉತ್ತೇಜಿಸಿ, ಹಾಕಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದೊಂದಿಗೆ, ಜಿಲ್ಲೆಯ ಹಾಕಿ ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚುವ ಸದುದ್ದೇಶದೊಂದಿಗೆ ಜಿಲ್ಲೆಯಲ್ಲಿ ಸುಸಜ್ಜಿತ ಟರ್ಫ್ ಹಾಕಿ ಕ್ರೀಡಾಂಗಣವು ರವಿವಾರದಂದು ಉದ್ಘಾಟನೆಗೆ ಅಣಿಯಾಗಿದೆ.

ಸುಸಜ್ಜಿತ ಟರ್ಫ್ ಹಾಕಿ ಕ್ರೀಡಾಂಗಣವು ಉತ್ತರ ಕರ್ನಾಟಕ ಭಾಗದಲ್ಲೇ ಪ್ರಥಮವಾಗಿದ್ದು, ಜಿಲ್ಲೆಯ ಪ್ರತಿಭಾವಂತ ಹಾಕಿ ಪಟುಗಳು ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಲು ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲರು ವೇದಿಕೆಯನ್ನು ಕಲ್ಪಿಸಿಕೊಟ್ಟಿದ್ದಾರೆ.

ಗುಣಾತ್ಮಕ ಹಾಗೂ ರಚನಾತ್ಮಕ ಕಾರ್ಯ ವೈಖರಿಯಿಂದ ಹೆಸರಾಗಿರುವ ಸಚಿವ ಎಚ್.ಕೆ ಪಾಟೀಲರು ಜಿಲ್ಲೆಯ ಯುವ ಪೀಳಿಗೆಯಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ ಅದನ್ನು ಅಂತಾರಾಷ್ಟ್ರೀಯ ಮಟ್ಟದವರೆಗೂ ಪ್ರಚುರಪಡಿಸುವ ಕಾರ್ಯದಲ್ಲಿ ಛಾಪು ಮೂಡಿಸಿದ್ದಾರೆ. ಅವರ ಅಭಿವೃದ್ಧಿ ಹಾಗೂ ಕ್ರಿಯಾಶೀಲ ಚಟುವಟಿಕೆಗಳ ಪಟ್ಟಿಗೆ ಇಂದು ಮಹಾತ್ಮಾ ಗಾಂಧಿ ಹಾಕಿ ಕ್ರೀಡಾಂಗಣ ಸೇರಿದೆ.

3.18 ಕೋಟಿ ರೂ.ಗಳಲ್ಲಿ 2 ಕೋಟಿ ರೂ. ಬಿಡುಗಡೆಯಾಗಿದ್ದು, ಬಾಕಿ ಅನುದಾನ 1.18 ಕೋಟಿ ರೂ. ಲೋಕೋಪಯೋಗಿ ಇಲಾಖೆಗೆ ಬಿಡುಗಡೆಯಾಗಬೇಕಿದೆ. ಕ್ರೀಡಾಂಗಣ ಉದ್ಘಾಟನೆಗೆ ಸಿದ್ಧಗೊಳ್ಳಲು ಅಗತ್ಯವಿರುವ ಕಾಮಗಾರಿಗಳನ್ನು 26 ಲಕ್ಷ ರೂ.ಗಳಲ್ಲಿ ನಿರ್ಮಿತಿ ಕೇಂದ್ರ ಗದಗ ಇವರಿಂದ ಪೂರ್ಣಗೊಳಿಸಲಾಗಿದೆ. ಕ್ರೀಡಾಂಗಣ ನಿರ್ಮಾಣಕ್ಕೆ ಇಲ್ಲಿಯವರೆಗೂ ಒಟ್ಟೂ 9.49 ಕೋಟಿ ರೂ.ಗಳನ್ನು ವ್ಯಯಿಸಲಾಗಿದೆ.

ಹಾಕಿ ಕ್ರೀಡಾಂಗಣ ಅಭಿವೃದ್ಧಿಗಾಗಿ ವಿವಿಧ ಕಾಮಗಾರಿಗಳಾದ ಡಗೌಟ್, ಗೋಲ್ ಪೋಸ್ಟ್ ಹಿಂದೆ ಪೆನ್ಸಿಂಗ್ ವಿಥ್ ನೆಟ್, ಕಂಪೌಂಡ ಗೋಡೆ, ವಾಟರ್ ಟ್ಯಾಂಕ್, ಲ್ಯಾಗಿಂಗ್ ಗಟಾರದ ಮೇಲೆ ಪ್ರಾಕ್ಟೀಸ್ ಪಿಚ್, ಕ್ರೀಡಾಂಗಣ ದುರಸ್ತಿ, ಹಳೆಯ ಕಟ್ಟಡ ರಿಪೇರಿ ಸೇರಿದಂತೆ ವಿವಿಧ ಕಾಮಗಾರಿಗಳಿಗೆ 2 ಕೋಟಿ ರೂ.ಗಳ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಹಾಕಿ ಕ್ರೀಡಾಂಗಣ ಉದ್ಘಾಟನಾ ಸಮಾರಂಭದ ನಿಮಿತ್ತ ಸೆಪ್ಟೆಂಬರ್ 3ರಿಂದ 5ರವರೆಗೆ ಹಾಕಿ ಪಂದ್ಯಾವಳಿಗಳು ಜರುಗಲಿವೆ. ಪಂದ್ಯಾವಳಿಗಳಲ್ಲಿ ಗದಗ-ಬೆಟಗೇರಿಯ ಹನುಮಾನ್ ಬ್ಲೆಸಿಂಗ್ ಸ್ಪೋರ್ಟ್ಸ್ ಕ್ಲಬ್, ಬೆಂಗಳೂರಿನ ಕರ್ನಾಟಕ ರಾಜ್ಯ ಪೊಲೀಸ್ ತಂಡ, ಹುಬ್ಬಳ್ಳಿ ಸೌತ್ ವೆಸ್ಟರ್ನ್ ರೈಲ್ವೆ ತಂಡ, ಹುಬ್ಬಳ್ಳಿಯ 11 ತಂಡ, ಬೆಂಗಳೂರಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಎ ಮತ್ತು ಬಿ ತಂಡಗಳು ಭಾಗವಹಿಸಲಿವೆ.

ನಂದೀಶ್ವರ ನಗರದ ಈಜುಕೊಳ : ನಗರದ ಕಳಸಾಪುರ ರಸ್ತೆಯಲ್ಲಿನ ನಂದೀಶ್ವರ ನಗರದ ಒಳಾಂಗಣ ಕ್ರೀಡಾಂಗಣದ ಹಿಂದುಗಡೆ ನಿರ್ಮಾಣವಾದ ಈಜುಕೊಳವನ್ನು ಸಚಿವ ಬಿ.ನಾಗೇಂದ್ರ ಅವರು ರವಿವಾರ ಸಾಯಂಕಾಲ 4 ಗಂಟೆಗೆ ಲೋಕಾರ್ಪಣೆಗೊಳಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಅಧ್ಯಕ್ಷತೆ ವಹಿಸುವರು. ಗದಗ ಬೆಟಗೇರಿ ನಗರಸಭೆ ವತಿಯಿಂದ ಎಸ್‌ಎಫ್‌ಸಿಯ ಎಸ್‌ಸಿ/ಎಸ್‌ಪಿ ಅನುದಾನದ 168.50 ಲಕ್ಷ ರೂ.ಗಳಲ್ಲಿ ಈಜುಕೊಳ ನಿರ್ಮಾಣಗೊಂಡಿದೆ.

ಇಲ್ಲಿ ಸೆಮಿಓಲಂಪಿಕ್ ಸೈಜ್ ಪಂದ್ಯಾವಳಿಗಳನ್ನು ಆಯೋಜಿಸಬಹುದಾಗಿದೆ. 21ಮೀ ಅಗಲ ಮತ್ತು 25ಮೀ ಉದ್ದ ಅಳತೆ ಹೊಂದಿದ ಈ ಈಜುಕೊಳ ಒಂದು ಬದಿ 4 ಅಡಿ ಹಾಗೂ ಇನ್ನೊಂದು ಬದಿ 5.50 ಅಡಿ ಆಳದಲ್ಲಿ ನಿರ್ಮಾಣಗೊಂಡು ಉದ್ಘಾಟನೆಗೆ ಸಿದ್ಧವಾಗಿದೆ. ಈಜುಗೊಳದ ನೀರನ್ನು ಮರುಬಳಕೆ ಮಾಡಲು ನೀರು ಶುದ್ಧೀಕರಣ ಘಟಕವನ್ನೂ ನಿರ್ಮಾಣ ಮಾಡಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ವಿಶೇಷ ಘಟಕ ಉಪಯೋಜನೆಯಡಿ 2016-17ನೇ ಸಾಲಿನಲ್ಲಿ ಬೆಟಗೇರಿಯ ಗಾಂಧಿ ನಗರದಲ್ಲಿ ಮಹಾತ್ಮಾ ಗಾಂಧಿ ಹಾಕಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಪ್ರಾರಂಭವಾಯಿತು. ಮೊದಲನೇ ಹಂತದ ಕಾಮಗಾರಿಯಲ್ಲಿ 23-6-2016ರಂದು ಕ್ರೀಡಾಂಗಣ ನಿರ್ಮಾಣಕ್ಕೆ 5 ಕೋಟಿ ರೂ ಮತ್ತು ಹೆಚ್ಚುವರಿಯಾಗಿ 1.05 ಕೋಟಿ ರೂ, ಹೀಗೆ ಒಟ್ಟು 6.05 ಕೋಟಿ ರೂ ಬಿಡುಗಡೆಯಾಗಿದ್ದು, ಅದರಲ್ಲಿ ಪೆವಿಲಿಯನ್ ಕಟ್ಟಡ, ಮೈದಾನ ಸಮತಟ್ಟುಗೊಳಿಸುವಿಕೆ, ಡಾಂಬರೀಕರಣ, ಚೈನ್ ಲಿಂಕ್ ಫೆನ್ಸಿಂಗ್ ಹಾಗೂ ವಿದ್ಯುದೀಕರಣ ಕೆಲಸಗಳು ಮೊದಲ ಹಂತದಲ್ಲಿ ಪೂರ್ಣಗೊಂಡಿವೆ.

ಎರಡನೆ ಹಂತದ ಕಾಮಗಾರಿಯಲ್ಲಿ 16-02-2019ರಂದು ಕ್ರೀಡಾಂಗಣ ನಿರ್ಮಾಣಕ್ಕೆ 3.18 ಕೋಟಿ ರೂ. ಬಿಡುಗಡೆಯಾಗಿ ಸಿಂಥೆಟಿಕ್ ಟರ್ಫ್, ನೀರಿನ ವ್ಯವಸ್ಥೆ ಹಾಗೂ ಅಗತ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

**ಲೋಕಾರ್ಪಣೆ:** ರವಿವಾರ ಸಂಜೆ 4.30ಕ್ಕೆ ಹಾಕಿ ಕ್ರೀಡಾಂಗಣದ ಲೋಕಾರ್ಪಣೆಗೊಳ್ಳಲಿದೆ. ವಿ ಪ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದು, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಎಚ್.ಸಿ ಮಹಾದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ವಿಶೇಷ ಆಹ್ವಾನಿತರಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ಆಗಮಿಸುವರು.

ಇದೇ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಹಾಕಿ ಕ್ರೀಡಾಪಟುಗಳಾದ ರಾಜು ಬಗಾಡೆ, ಹರೀಶ ಮುಟಗಾರ, ಹಿರಿಯ ಹಾಕಿ ಕ್ರೀಡಾಪಟುಗಳಾದ ಹನುಮಂತಪ್ಪ ವೀರಾಪೂರ, ಗಂಗಣ್ಣ ಕೋಟಿ, ರಘುನಾಥಸಾ ಶಿದ್ಲಿಂಗ್, ಯಲ್ಲಪ್ಪ ಗಡಾದ, ಯಲ್ಲಪ್ಪ ಕೊರವರ, ವಿ.ಎಸ್ ಮಣಿ, ಕಾರ್ಲಟನ್ ಗೋಮ್ಸ್ ಅವರನ್ನು ಸನ್ಮಾನಿಸಲಾಗುವುದು.

# ತಿಂಗಳು ಕಳೆದರೂ ಹೊರಬರದ ನಿರ್ಧಾರ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಪಟ್ಟಣದ ಸಂತೆ ಮಾರುಕಟ್ಟೆ ವಿಚಾರದಲ್ಲಿ ಮೇಲಿಂದ ಮೇಲೆ ಕರೆಯುತ್ತಿರುವ ಸಭೆಗಳು ಗೊಂದಲದ ಗೂಡಾಗುತ್ತಿವೆ. ಸಂತೆ ಸ್ಥಳಾಂತರದ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲು ಶನಿವಾರ ಸಂಜೆ ಕರೆದಿದ್ದ ಸಭೆಯೂ ಇದೇ ವಾತಾವರಣದಲ್ಲಿ ಮುಕ್ತಾಯವಾಯಿತು.

ಗಜೇಂದ್ರಗಡ ತಹಸೀಲ್ದಾರ, ಪ.ಪಂ ಆಡಳಿತಾಧಿಕಾರಿ ಕಿರಣಕುಮಾರ ಕುಲಕರ್ಣಿ ಅಧ್ಯಕ್ಷತೆಯಲ್ಲಿ ಪ.ಪಂ ಮುಂಭಾಗದಲ್ಲಿ ಪ್ರಾರಂಭವಾದ ಸಾರ್ವಜನಿಕರ ಅಭಿಪ್ರಾಯ ಸಂಗ್ರಹ ಸಭೆಯಲ್ಲಿ, ಸಂತೆ ಸ್ಥಳಾಂತರದ ಸಾರ್ವಜನಿಕರು ಪರ-ವಿರೋಧದ ವಾದ ಮಂಡಿಸಿದರು. ಇದರಿಂದ ಕೆಲ ಕಾಲ ಸಭೆಯಲ್ಲಿ ಗೊಂದಲದ ವಾತಾವರಣ ಸೃಷ್ಟಿಯಾಯಿತು.

ಪೊಲೀಸರು ಮಧ್ಯ ಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರಾದರೂ, ಸಂತೆ ಸ್ಥಳಾಂತರ ವಿರೋಧಿಸಿದವರು ಸಭೆಯಿಂದ ಹೊರನಡೆದಿದ್ದರಿಂದ ಯಾವುದೇ ನಿರ್ಣಯ ಕೈಗೊಳ್ಳಲಾಗದೆ ಸಭೆಯನ್ನು ಮೊಟಕುಗೊಳಿಸಲಾಯಿತು.

ಪ.ಪಂ ಮಾಜಿ ಅಧ್ಯಕ್ಷ ಕಲ್ಮೇಶ ತೊಂಡಿಹಾಳ, ಶರಣಪ್ಪ ಕಲಾಲಬಂಡಿ, ಮಂಜುನಾಥ ಹೆಗಡೆ, ಡಾ. ರಾಜೇಂದ್ರ ಗಚ್ಚಿನಮಠ, ಶಶಿಧರ ಸಂಕನಗೌಡ್ರ, ಬಸವರಾಜ ವಂಕಲಕುಂಟಿ, ಸಂತೋಷ ಹಮನಸಾಗರ, ನಾಗೇಶ ಮಣ್ಣವಡ್ಡರ, ಶರಣಪ್ಪ ಜುಟ್ಲ, ಚನ್ನಬಸಪ್ಪ ಕುಷ್ಟಗಿ, ಬಸವರಾಜ ಹತ್ತಿಕಟಗಿ, ಪ್ರವೀಣ ಹೂಗಾರ, ಸಂತೋಷ ಮಣ್ಣವಡ್ಡರ, ಬಸವರಾಜ ಕೋಟಗಿ, ಜಗದೀಶ ಸಂಕನಗೌಡ್ರ, ಪ.ಪಂ ಮುಖ್ಯಾಧಿಕಾರಿ ಶಿವಾನಂದ ಅಜ್ಜಣ್ಣವರ, ಎಎಸ್‌ಐ ಶೇಖರ ಹೊಸಳ್ಳಿ ಸೇರಿದಂತೆ ಸಿಬ್ಬಂದಿ, ಸಾರ್ವಜನಿಕರು ಇದ್ದರು.

# ಎಪಿಎಂಸಿ ಮಾರುಕಟ್ಟೆಯಲ್ಲಿ 15 ಸಾವಿರ ರೂ. ಗಡಿ ದಾಟಿದ ಹೆಸರು

**■ವಿಜಯಸಾಕ್ಷಿ ಸುದ್ದಿ, ಗದಗ**

ಮುಂಗಾರು ಮಳೆ ಆರಂಭದಲ್ಲಿ ಅಲ್ಲಲ್ಲಿ ಸ್ವಲ್ಪ ಮಳೆಯಾಗಿತ್ತು. ಮುಂಗಾರು ಹೆಸರು ಬಿತ್ತನೆ ಅವಧಿ ಮುಗಿಯುವ ಹಂತದಲ್ಲಿ ಕೆಲ ರೈತರು ಧೈರ್ಯ ಮಾಡಿ ಹೆಸರು ಬಿತ್ತನೆ ಮಾಡಿದ್ದರು.

ಹೇಳಿಕೊಳ್ಳುವ ಇಳುವರಿ ಬರದಿದ್ದರೂ, ಮಾರುಕಟ್ಟೆಯಲ್ಲಿ ಹೆಸರು ಕಾಳಿಗೆ ಹೆಚ್ಚಿನ ಬೇಡಿಕೆ ಇರುವ ಕಾರಣ, ಆಗಸ್ಟ್ ಮೊದಲ ವಾರದ ಪ್ರಾರಂಭದಲ್ಲಿ ಹೆಸರು ಕಾಳಿಗೆ 8 ಸಾವಿರ ರೂ ಪ್ರಾರಂಭದ ಧಾರಣೆಯಿತ್ತು.



ಗದುಗಿನ ಶ್ರೀ ಪಂಚಾಕ್ಷರ ಗವಾಯಿಗಳ ಮಾರುಕಟ್ಟೆ(ಎಪಿಎಂಸಿ)ಯಲ್ಲಿ ಶನಿವಾರ ಗದಗ, ಕೊಪ್ಪಳ, ಧಾರವಾಡ ಮತ್ತಿತರ ಜಿಲ್ಲೆಗಳಿಂದ ಹೆಸರು ಕಾಳು ಆವಕವಾಯಿತು. ರೋಣ ತಾಲೂಕಿನ ಹೊನ್ನಿಗನೂರಿನ ರೈತ ಅಮರೇಶ ಬಾವಿ ಅವರು ಪಿ.ಎನ್ ಮೂಲಿಮನಿ ದಲಾಲಿ ಅಂಗಡಿಯಲ್ಲಿ ಟೆಂಡರ್‌ಗೆ ಇಟ್ಟಿದ್ದ ಎರಡು ಚೀಲ ಹೆಸರನ್ನು 15,001 ರೂ.ಗಳಿಗೆ ಅನ್ನದಾನೇಶ್ವರ ಬ್ರದರ್ಸ್ ಖರೀದಿ ಮಾಡಿದ್ದು, ಮಾರುಕಟ್ಟೆಯಲ್ಲಿ ಗರಿಷ್ಠ ಬೆಲೆಯನ್ನು ದಾಖಲಿಸಿತು.









**ಗದಗ:** ನಗರದ ವೀರನಾರಾಯಣ ದೇವಸ್ಥಾನದಲ್ಲಿ ಹಾಗೂ ನಗರದ ಕರಿಯಮ್ಮ ಬಡಾವಣೆಯಲ್ಲಿರುವ ಗುರುರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಿಯಲ್ಲಿ ಶ್ರೀಗುರು ರಾಘವೇಂದ್ರ ಸ್ವಾಮಿಗಳವರ 352ನೇ ಆರಾಧನಾ ಮಹೋತ್ಸವದ ಅಂಗವಾಗಿ ರಥೋತ್ಸವ ನೆರವೇರಿತು.

ಶನಿವಾರ ಉತ್ತರಾರಾಧನೆ ಅಂಗವಾಗಿ ಬೆಳಗ್ಗೆ ಶ್ರೀಗುರುಪದಹಾರ ಪಾರಾಯಣ, ಅಷ್ಟೋತ್ತರ, ಮನುಸೂಕ್ತದಿಂದ ಹೋಮ, ಸಾಯಂಕಾಲ ಚೈತನ್ಯ ಸಂಗೀತ ಪಾಠಶಾಲೆ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ನಡೆಯಿತು. ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಿಯಲ್ಲಿ ಉತ್ತರಾರಾಧನೆ ನಡೆಯಿತು.

# ರಾಯರ ರಥೋತ್ಸವ ಸಂಪನ್ನ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ರಾಘವೇಂದ್ರ ಸ್ವಾಮಿಗಳ ಆರಾಧನೆಯ ನಿಮಿತ್ತ, ಕೊನೆಯ ದಿನವಾದ ಶನಿವಾರ ರಾಯರ ರಥೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು. ರಥೋತ್ಸವದ ನಂತರ ಶ್ರೀಮಠದಲ್ಲಿ ಭಜನೆ, ನೃತ್ಯಗಳು ಸಂಪ್ರದಾಯದಂತೆ ಅದ್ದೂರಿಯಾಗಿ ಜರುಗಿದವು. ಮದ್ಯಾಹ್ನ ಸಾವಿರಾರು ಭಕ್ತರು ಮಹಾಪ್ರಸಾದ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಶ್ರೀಮಠದ ಧರ್ಮದರ್ಶಿ ಹನುಮಂತಾಚಾರ್ಯ ಹೊಂಬಳ, ಬ್ರಹ್ಮವೃಂದದ ಅಧ್ಯಕ್ಷ ಗೋಪಾಲ ಪಡ್ನಿಸ್, ವ್ಹಿ.ಎಲ್ ಪೂಜಾರ, ಡಾ.ಚಂದ್ರು ಲಮಾಣಿ, ಕೆ.ಎಸ್ ಕುಲಕರ್ಣಿ, ಎ.ಪಿ ಕುಲಕರ್ಣಿ, ನಾರಾಯಣಭಟ್ ಪುರಾಣಿಕ, ವೆಂಕಟೇಶ ಗುಡಿ, ಗುರುರಾಜ ಪಾಟೀಲಕುಲಕರ್ಣಿ, ವೇದವ್ಯಾಸ ಹೊಂಬಳ, ಮನೋಜ ಹೊಂಬಳ, ಅನಿಲ ಕುಲಕರ್ಣಿ, ರಾಜಣ್ಣ ಕುಂಬಿ, ಮಹೇಶ ಹೊಗೆಸೊಪ್ಪಿನ್, ಶರಣು ಗೋಡಿ, ಬಾಬು ಅಳವಂಡಿ, ಗಂಗಾಧರ ಗೋಡಿ, ಶ್ರೀಪಾದರಾಜ ಹೊಂಬಳ, ಗುರುರಾಜ ಸುಳ್ಳದ, ಕೆ.ಎಸ್ ಕುಲಕರ್ಣಿ, ರಾಘವೇಂದ್ರ ಗೊಗ್ಗಿ, ಕೃಷ್ಣಕುಮಾರ ಕುಲಕರ್ಣಿ, ಅನಿಲ ಕುಲಕರ್ಣಿ, ಶ್ರೀನಿವಾಸ ಹುಲಮನಿ, ಶ್ರೀಕಾಂತ ಪೂಜಾರ, ಡಾ.ಪ್ರಸನ್ನ ಕುಲಕರ್ಣಿ, ಡಿ.ಎಂ ಪೂಜಾರ, ಮಂಜುನಾಥ ಒಂಟಿ, ಪ್ರಾಣೇಶ ಬೆಳ್ಳಟ್ಟಿ, ರಮೇಶ ತೊರಗಲ್, ಧೃವ ಬೆಟಗೇರಿ, ರವೀಂದ್ರ ರಾಯಚೂರ, ಗಂಗಾಧರ ಹಳ್ಳಿಕೇರಿ ಸೇರಿದಂತೆ ನೂರಾರು ಭಕ್ತರು ಪಾಲ್ಗೊಂಡಿದ್ದರು.

# ಸ್ವ ಸಹಾಯ ಗುಂಪು ಸದಸ್ಯರ ನೇಮಕಾತಿಗಾಗಿ ಆಸಕ್ತಿಯುಳ್ಳ ಸದಸ್ಯರಿಗೆ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯ ಮುಳಗುಂದ ಪಟ್ಟಣ ಪಂಚಾಯತಿ ಜೊತೆಗೆ ಪೂರ್ಣಾವಧಿಗೆ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು NULM/Day/NRLM/NGO ಅಡಿಯಲ್ಲಿ ನೊಂದಾಯಿತ ಎಸ್‌ಎಚ್‌ಜಿ/ ಎನ್‌ಜಿಓ ಸದಸ್ಯರಿಂದ ಗದಗ ಜಿಲ್ಲೆಯ ಮುಳಗುಂದ ಪಟ್ಟಣ ಪಂಚಾಯತಿಯ ಆಸಕ್ತಿ ಅಭಿವ್ಯಕ್ತಿಯನ್ನು ಆಹ್ವಾನಿಸಲಾಗಿದೆ. ಆಯ್ಕೆ ಪ್ರಕ್ರಿಯೆ ಮತ್ತು ಗೌರವ ಧನಕ್ಕೆ ಸಂಬಂಧಿತ ವಿವರಗಳನ್ನು https://mulgundatown.mrc.gov.in ನಲ್ಲಿ ವೀಕ್ಷಿಸಬಹುದಾಗಿದೆ ಎಂದು ಮುಳಗುಂದ ಪಟ್ಟಣ ಪಂಚಾಯತ ಕಾರ್ಯಾಲಯದ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದುಗಿನ ಶ್ರೀ ಪಂಚಮೂರ್ತಿ ಹಾಗೂ ನವಗ್ರಹ ಗಜಾನನ ಮಂಡಳಿ ವತಿಯಿಂದ ಇತ್ತೀಚೆಗೆ 24ನೇ ವರ್ಷದ ಗಣಪತಿಯ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷ ವೀರೇಂದ್ರ ಬಾಳಿಗೇರಿ, ಉಪಾಧ್ಯಕ್ಷ ವೀರೇಶ ಹೊನಗುಡಿ, ಕಾರ್ಯದರ್ಶಿ ಸಮರ್ಥ ನವಲೂರ, ಸಹಕಾರ್ಯದರ್ಶಿ ಕಾರ್ತಿಕ ಭಜಂತ್ರಿ, ಖಜಾಂಚಿ ಅಕ್ಷಯ ವಿಶ್ವಕರ್ಮ, ಮಲ್ಲು ದೇಗುಲ ಸೇರಿದಂತೆ ಸರ್ವ ಪದಾಧಿಕಾರಿಗಳು, ಮಹಿಳಾ ಮುಖಂಡರು, ಓಣಿಯ ಸಮಸ್ತ ಬಾಂಧವರು ಉಪಸ್ಥಿತರಿದ್ದರು.



# ರೈತರಿಗೆ ತೋಟಗಾರಿಕೆ ಅಧಿಕಾರಿ ಸಲಹೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಲಕ್ಷ್ಮೇಶ್ವರ ತಾಲೂಕಿನಲ್ಲಿ ಸುಮಾರು 2200 ಹೆಕ್ಟೇರಿನಷ್ಟು ಮೆಣಸಿನಕಾಯಿ ಬೆಳೆ ಬೆಳೆದಿದ್ದು, ಮಳೆಯ ಕೊರತೆ, ಮಣ್ಣಿನಲ್ಲಿಯ ತೇವಾಂಶದ ಕೊರತೆಯಿಂದಾಗಿ, ಈ ಬೆಳೆಗೆ ಹಲವಾರು ಕೀಟ ಮತ್ತು ರೋಗಗಳ ಬಾಧೆ ಕಂಡು ಬಂದಿದ್ದು, ಅದರ ಸಮಗ್ರ ನಿರ್ವಹಣೆಗಾಗಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಸುರೇಶ ಕುಂಬಾರ ಅವರು ತಾಲೂಕಿನ ಗೊಜನೂರು ಗ್ರಾಮದ ವಿವಿಧ ರೈತರ ತಾಕುಗಳಿಗೆ ಭೇಟಿ ನೀಡಿ ಪರಿಶೀಲಿಸಿ, ರೈತರಿಗೆ ಸಲಹೆ ನೀಡಿದರು.

ತಡವಾದ ಬಿತ್ತನೆ, ಮಳೆಯ ಕೊರತೆ, ಮಣ್ಣಿನಲ್ಲಿರುವ ತೇವಾಂಶ ಕೊರತೆ, ಹವಾಮಾನ ವೈಪರಿತ್ಯದಿಂದಾಗಿ ಈ ಬೆಳೆಗೆ ರಸ ಹೀರುವ ಕೀಟಗಳಾದ ಸಸ್ಯ ಹೇನು, ಥ್ರಿಪ್ಸ್ ನುಸಿ, ಜೇಡನುಸಿ, ಎಲೆ ಕತ್ತರಿಸುವ ಹುಳು, ಎಲೆಮುಟರು ರೋಗ, ಎಲೆ ಚುಕ್ಕೆ ರೋಗ, ಬೂದಿ ರೋಗ ಮುಂತಾದ ರೋಗಗಳು ಕಂಡು ಬಂದಿವೆ. ಇದರ ನಿರ್ವಹಣೆಗಾಗಿ ಸಮಗ್ರ ನಿಯಂತ್ರಣ ಕ್ರಮಗಳನ್ನು ಕೈಗೊಂಡಾಗ ಉತ್ತಮ ಇಳುವರಿ ಮತ್ತು ಹೆಚ್ಚಿನ ಲಾಭ ಪಡೆಯಲು ಸಾಧ್ಯವೆಂದರು.

3 ಗ್ರಾಂ ಥೈಯೋಮಿಥೋಕ್ಸಾಮ್, 10 ಗ್ರಾಂ ಪೆಗಾಸಿಸ್, 20 ಮಿಲೀ ಬೇವಿನ ಎಣ್ಣೆ (10000 ಪಿ ಪಿ ಎಂ) 10 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದು. ಒಂದು ವಾರದ ನಂತರ 15 ಮಿಲೀ ಬೆನೆವಿಯಾ, 10 ಗ್ರಾಂ ಸ್ಪೈರೋ ಮೆಸಿಫಿನ್, 20 ಮಿಲೀ ಬೇವಿನ ಎಣ್ಣೆ (10000 ಪಿ ಪಿ ಎಂ), 10 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಒಂದು ವಾರ ಬಿಟ್ಟು 25 ಮಿಲೀ ಡಿಕೋಫಾಲ್, 10 ಗ್ರಾಂ ಕಾರ್ಬನಡೈಜಿಂ, 20 ಮಿಲೀ ಬೇವಿನ ಎಣ್ಣೆ (10000 ಪಿ ಪಿ ಎಂ) 10 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದು. ಕೀಟ ರೋಗ ತೀವ್ರತೆ ನೋಡಿಕೊಂಡು, 3 ಮಿಲೀ ಇಮಿಡಾಕ್ಲೋಪ್ರಿಡ್, 30 ಗ್ರಾಂ ನೀರಿನಲ್ಲಿ ಕರಗುವ ಗಂಧಕ, 20 ಮಿಲೀ ಬೇವಿನ ಎಣ್ಣೆ (10000 ಪಿ ಪಿ ಎಂ) 10 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದು. ಸಸ್ಯಗಳ ಬೆಳವಣಿಗೆ, ಹೂವು ಬಿಡಲು, ಕಾಯಿ ಕಚ್ಚಲು, 50 ಗ್ರಾಂ ಸಾರಜನಕ, ರಂಜಕ ಪೊಟ್ಯಾಷ್ (19:19:19) ಯುಕ್ತ ಗೊಬ್ಬರದ ಜೊತೆಗೆ 50 ಗ್ರಾಂ/ಮಿಲೀ, ಲಘು ಪೋಷಕಾಂಶಗಳ ಮಿಶ್ರಣದೊಂದಿಗೆ 10 ಲೀಟರ್ ನೀರಿನಲ್ಲಿ ಬೆರೆಸಿ, 2-3 ಸಾರಿ ಸಿಂಪಡಿಸುವುದು.

ಪ್ರತಿ ಹೆಕ್ಟೇರಿಗೆ ಬೇಕಾಗುವ 1.5 ಕಿ.ಗ್ರಾಂ ಬಳ್ಳೊಳ್ಳಿ, ಹಾಗೂ 1.5 ಕಿ.ಗ್ರಾಂ ಹಸಿಮೆಣಸಿನಕಾಯಿಯನ್ನು ಕುಟ್ಟಿ, ಪ್ರತ್ಯೇಕವಾಗಿ 1.5 ಲೀಟರ್ ಸೀಮೆ ಎಣ್ಣೆಯಲ್ಲಿ 8 ಗಂಟೆ ನೆನಸಿಡಬೇಕು ನಂತರ ಹಿಂಡಿ, ರಸ ತೆಗೆದು ಸೋಸಬೇಕು. ಎರಡೂ ಕಷಾಯಗಳನ್ನು ಕೂಡಿಸಿ ಅದಕ್ಕೆ 1.2 ಕಿ.ಗ್ರಾಂ ಸಾಬೂನಿನ ದ್ರಾವಣ ಬೆರೆಸಿ ಸಿಂಪರಣೆಗೆ ಪ್ರತಿ 10 ಲೀಟರ್ ನೀರಿಗೆ 50 ಮಿ.ಲೀ ನಂತೆ ಉಪಯೋಗಿಸಬೇಕು.

ಈ ವಿಧಾನಗಳನ್ನು ಅಳವಡಿಸಿಕೊಂಡಾಗ ಉತ್ತಮ ಬೆಳವಣಿಗೆ, ಹೆಚ್ಚಿನ ಇಳುವರಿ ಹಾಗೂ ಅಧಿಕ ಲಾಭ ಪಡೆಯಲು ಸಾಧ್ಯವಾಗುವುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಸುರೇಶ ವೀ ಕುಂಬಾರ ಅವರು ರೈತರಿಗೆ ತಿಳಿಸಿದರು. ಈ ಸಂರ್ಭದಲ್ಲಿ ಪ್ರಗತಿಪರ ರೈತರಾದ ಚನ್ನಪ್ಪ ಷಣ್ಮುಖಿ, ಸಿ. ಪಿ. ಮಾಡಳ್ಳಿ, ಯಲ್ಲಪ್ಪ ಮೋಡಿ, ಶೇಕಪ್ಪ ಕ ಸೊರಟೂರ, ಅಜ್ಜಯ್ಯ ಪ್ರಭಯ್ಯನವರಮಠ, ಸಿದ್ದಲಿಂಗೇಶ ಮಾಡಳ್ಳಿ ಮುಂತಾದವರು ಹಾಜರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka